KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜೂನ್ ೧೭, ೨೦೧೦ (ಜ್ಯೇಷ್ಠ ೨೭, ಶಕ ವರ್ಷ ೧೯೩೨)	ಸಂಚಿಕೆ ೨೪

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE & INDUSTRIES SECRETARIAT

Sub : Approval to the project proposal of M/s. Fowlerwestrup (India) Pvt Ltd., to establish a unit for manufacture of Agricultural products processing machinery, Transformer oil conditioning machinery and Galvanized Silo at Malur Industrial Area, Kolar District.

Read : Proceedings of the 21st State High Level Clearance Committee(SHLCC) meeting held on 29.03.2010.

Preamble:

M/s. Fowlerwestrup (India) Pvt Ltd., Proposes to establish a unit for manufacture of Agricultural products processing machinery, Transformer oil conditioning machinery and Galvanized Silo at Malur Industrial Area, Kolar District, with an investment of Rs. 166 crores, generating employment to about 700 persons.

In the 21st State High Level Clearance Committee (SHLCC) meeting held on 29.03.2010, the proposal of the Company has been approved.

Government has examined the recommendations made by the State High Level Clearance Committee in the 21st meeting held on 29.03.2010, in all aspects.

Hence the following Order.

Government Order No. CI 131 SPI 2010, Bangalore, Dated 26th April, 2010

Government is pleased to accord in principle approval to the project proposal of M/s. Fowlerwestrup (India) Pvt Ltd., to establish a unit for manufacture of Agricultural products processing machinery, Tansformer oil conditioning machinery and Galvanized Silo at Malur Industrial Area, Kolar District, with an investment of Rs. 166 crores, generating employment to about 700 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** 20 acres – at Malur Industrial Area, Kolar District.
2. **Power :** 450 KVA to be serviced by BESCOM.
3. **Water :** 30 MLD to be supplied by KIADB.
4. **Incentives and Concessions :** As applicable under Industrial Policy of the state.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions. of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Whereever there is scope for vendor development for the project, the company shall prepare a vendor development plan, develop local vendors and procure the required inputs, components and sub-assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**

a) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

Aparna Pavate
Desk Officer (Technical Cell)
Commerce & Industries Department.

PR. 1121

ಯುವಜನ ಸೇವಾ ಸಚಿವಾಲಯ

ವಿಷಯ : ಶ್ರೀ ಬಿ. ಎ. ಅಶೋಕ್ ಕುಮಾರ್, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರ ವಿರುದ್ಧ ದಂಡನೆಯನ್ನು ವಿಧಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ವಾಪ್ರಯು:26:ಯುಇಸೇ:82, ದಿನಾಂಕ 30–07–1998

2) ಶ್ರೀ ಬಿ. ಎ. ಅಶೋಕ್ ಕುಮಾರ್, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ : 2433/99.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಶ್ರೀ ಬಿ. ಎ. ಅಶೋಕ್ ಕುಮಾರ್, ಸಹಾಯಕ ನಿರ್ದೇಶಕರು, (ಪ್ರಸಕ್ತ ಉಪ ನಿರ್ದೇಶಕರು) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರು 1982ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಯವಜನ ಸೇವಾ ಮತ್ತು ಕ್ರೀಡಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಇವರ ಕರ್ತವ್ಯ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನದಿಂದ ಹಣ ದುರುಪಯೋಗವಾಗಲು ಕಾರಣರಾಗಿರುತ್ತಾರೆಂದು ತೀರ್ಮಾನಿಸಿ ಶ್ರೀ ಬಿ. ಎ. ಅಶೋಕ್ ಕುಮಾರ್, ಸಹಾಯಕ ನಿರ್ದೇಶಕರು (ಪ್ರಸಕ್ತ ಉಪನಿರ್ದೇಶಕರು), ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 11 ಮತ್ತು 13ರ ನಿಯಮಾವಳಿಯ ನಿಯಮ 8 (111) (4)ರ ನಿಯಮದಡಿಯಲ್ಲಿ ಸದರಿಯವರ ಮುಂದಿನ ಎರಡು ವಾರ್ಷಿಕ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ (Without cumulative effect) ತಡೆಹಿಡಿಯಲಾಗಿತ್ತು.

ಮೇಲೆ ಓದಲಾದ (2)ರಲ್ಲಿ ಶ್ರೀ ಬಿ. ಎ. ಅಶೋಕ್ ಕುಮಾರ್, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರು ಮೇಲಿನ ಸರ್ಕಾರಿ ಆದೇಶದಲ್ಲಿ 2 ವಾರ್ಷಿಕ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ

ತಡೆಹಿಡಿದಿರುವ ಬಗ್ಗೆ ಪ್ರಶ್ನಿಸಿ, ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ : 2433/99ಗೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ : 05-02-2009ರ ತೀರ್ಪಿನಲ್ಲಿ ಶ್ರೀ ಬಿ. ಎ. ಅಶೋಕ್ ಕುಮಾರ್, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರಿಗೆ ಒಂದು ವಾರ್ಷಿಕ ಬಡ್ತಿಯನ್ನು ಮಾತ್ರ ಸಂಚಿತ ಪರಿಣಾಮ ರಹಿತವಾಗಿ (One increment shall be withheld which shall not have any cumulative effect) ತಡೆಹಿಡಿಯುವಂತೆ ಆದೇಶಿಸಿರುತ್ತದೆ.

ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ : 05-02-2009ರ ಆದೇಶದಂತೆ, ಆಪಾದಿತ ಅಧಿಕಾರಿಗೆ ಸರ್ಕಾರವು ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ವಾಪ್ರಯು : 179 ಯುಇಸೇ 1999, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 2010

ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿಸಂಖ್ಯೆ : 2433/99, ದಿನಾಂಕ : 05-02-2009ರ ತೀರ್ಪಿನನ್ವಯ ಶ್ರೀ ಬಿ. ಎ. ಅಶೋಕ್ ಕುಮಾರ್, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರಿಗೆ ಅವರ ಮುಂದಿನ ಎರಡು ವಾರ್ಷಿಕ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ (without cumulative effect) ತಡೆಹಿಡಿಯುವುದರ ಬದಲಾಗಿ ಅವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ (One increment shall be withheld which shall not have any cumulative effect) ತಡೆಹಿಡಿಯಲಾಗಿದೆಯೆಂದು ಆದೇಶಿಸಿದೆ.

ಸದರಿ ಅದೇಶವನ್ನು ಅಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಯುಸೇಇ 743 ಐಎಫ್ಎ 10, ದಿನಾಂಕ : 2/5-3-2010ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಜಿ. ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಪಿ.ಆರ್. 876

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಗೀತಾಶ್ರೀ ಡಿ. ಎಂ. ದಂತ ಆರೋಗ್ಯಾಧಿಕಾರಿ, ಸೇವಾನಿರತ ಸ್ನಾತಕೋತ್ತರ ವ್ಯಾಸಂಗದ ವಿದ್ಯಾರ್ಥಿ ಇವರು ವ್ಯಾಸಂಗವನ್ನು ಬಿಡಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 340 ಹೆಚ್ಎಸ್ಹೆಚ್ 07, ದಿನಾಂಕ : 06-06-2007.
2) ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 252 ಹೆಚ್ಎಸ್ಹೆಚ್ 08, ದಿನಾಂಕ : 02-06-2008.
3) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ : ಎಲ್ಆರ್ಒ/ 118/2008-2009, ದಿನಾಂಕ : 18-04-2009.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಡಾ॥ ಗೀತಾಶ್ರೀ ಡಿ. ಎಂ. ದಂತ ಆರೋಗ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ ಇವರನ್ನು 2007-08ನೇ ಸಾಲಿನಲ್ಲಿ ಸೇವಾನಿರತ ಸ್ನಾತಕೋತ್ತರ ವ್ಯಾಸಂಗಕ್ಕೆ ಬಾಪೂಜಿ ದಂತ ವಿದ್ಯಾಲಯ, ದಾವಣಗೆರೆ ಇಲ್ಲಿಗೆ ನಿಯೋಜಿಸಲಾಗಿತ್ತು. ಆದರೆ, ಸದರಿ ವೈದ್ಯರು ಕೌಟುಂಬಿಕ ಕಾರಣದ ನಿಮಿತ್ತ ವ್ಯಾಸಂಗವನ್ನು ಮೊಟಕುಗೊಳಿಸಿರುವುದಕ್ಕೆ ಕೆಲವೊಂದು ಷರತ್ತಿಗೆ ಒಳಪಟ್ಟು ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಸರ್ಕಾರದ ಅನುಮತಿಯನ್ನು ನೀಡಿ, ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ, ದಾವಣಗೆರೆ ಇಲ್ಲಿ ಖಾಲಿ ಇರುವ ದಂತ ಆರೋಗ್ಯಾಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿತ್ತು.

ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಡಾ॥ ಗೀತಾಶ್ರೀ ಡಿ. ಎಂ. ದಂತ ಆರೋಗ್ಯಾಧಿಕಾರಿ ಇವರು ಸ್ನಾತಕೋತ್ತರ ವ್ಯಾಸಂಗಕ್ಕೆ ಹೋಗುವಾಗ ಬರೆದು ಕೊಟ್ಟ ಕರಾರು ಪತ್ರದ ಅನ್ವಯ ಉಳಿದ ಕೋರ್ಸ್‌ನ ಫೀಯನ್ನು ಖಾಸಗಿ ದಂತ ಕಾಲೇಜಿಗೆ ಸಂದಾಯ ಮಾಡಿರುವುದಾಗಿ ಮತ್ತು

ಈ ಫೀಗೆ ಸಮಾನಾಂತರವಾದ ಮೊತ್ತವನ್ನು ಅವರ ಸಂಬಳದಿಂದ ಕಟಾಯಿಸಬಹುದೆಂದು ತಿಳಿಸಿ ದಿನಾಂಕ 13–06–2007 ರಿಂದ 04–06–2008ರ ವರೆಗೆ ಅಸಾಧಾರಣ ರಜೆ ಮಂಜೂರು ಮಾಡಿ ಈ ಅವಧಿಯನ್ನು ಸಕ್ರಮಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸಿದ್ದಾರೆ,

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 163 ಹೆಚ್‌ಎಸ್‌ಹೆಚ್ 2009, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಅನ್ವಯ, ಡಾ॥ ಗೀತಾಶ್ರೀ ಡಿ. ಎಂ. ದಂತ ಆರೋಗ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ, ದಾವಣಗೆರೆ ಜಿಲ್ಲೆ ಇವರು ಸೇವಾನಿರತ ಕೋಟಾದಲ್ಲಿ ಸ್ನಾತಕೋತ್ತರ ವ್ಯಾಸಂಗವನ್ನು ಮೊಟಕುಗೊಳಿಸಿರುವುದರಿಂದ ಕೆಳಕಂಡಂತೆ ಆದೇಶಿಸಿದೆ.

1) ಸ್ನಾತಕೋತ್ರರ ವ್ಯಾಸಂಗಕ್ಕೆ ಹಾಜರಾದ ದಿನಾಂಕದಿಂದ ಪುನಃ ನೇಮಕಾತಿ ಮಾಡಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದವರೆಗೆ ಅಂದರೆ, ದಿನಾಂಕ 13–06–2007 ರಿಂದ 04–06–2008ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 117 ಎ ಅನ್ವಯ ಅಸಾಧಾರಣ ರಜೆ ಮಂಜೂರು ಮಾಡಿ ಸಕ್ರಮಗೊಳಿಸಿದೆ.

2) ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳುವ ಸಮಯದಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಗೆ ಸಂದಾಯ ಮಾಡಿರುವ ರೂ. 50,000/–ಗಳನ್ನು ದಂಡವನ್ನಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಖಾಸಗಿ ಕಾಲೇಜಿಗೆ ಸ್ನಾತಕೋತ್ತರ ವ್ಯಾಸಂಗಕ್ಕೆ ಸಂದಾಯ ಮಾಡಿದ ಫೀ ಗೆ ಸಮಾನಾಂತರವಾದ ಮೊತ್ತವನ್ನು ಪ್ರತಿ ತಿಂಗಳ ಅವರ ಸಂಬಳದಲ್ಲಿ ಕಟಾಯಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಯುಕ್ತರಿಗೆ ನಿರ್ದೇಶಿಸಿದೆ.

3) ಸದರಿ ವೈದ್ಯರನ್ನು ಮುಂದಿನ ಮೂರು ಶೈಕ್ಷಣಿಕ ವರ್ಷಗಳ ಕಾಲಾವಧಿಯಲ್ಲಿ ಸೇವಾನಿರತ ಕೋಟಾದಲ್ಲಿ ಸ್ನಾತಕೋತ್ತರ/ಡಿಪ್ಲೊಮ ಪ್ರವೇಶ ಪರೀಕ್ಷೆ ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಐ. ಹೇಮನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಸೇವೆಗಳು–1)

ಪಿ.ಆರ್. 877

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಎಂ. ಸಿ. ವಿಜಯ, ಸೇವಾನಿರತ ಸ್ನಾತಕೋತ್ತರ ವ್ಯಾಸಂಗದ ವಿದ್ಯಾರ್ಥಿ ಇವರು ವ್ಯಾಸಂಗವನ್ನು ಬಿಡಲು ಅನುಮತಿ ನೀಡುವ ಹಾಗೂ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 86 ಹೆಚ್‌ಎಸ್‌ಹೆಚ್ 09 (ಭಾಗ–2) ದಿನಾಂಕ: 30–06–2009.

2) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ : ಜೆಆರ್‌ಒ (ಎಂ) 33/2009–10, ದಿನಾಂಕ 20–02–2010.

ಪ್ರಸ್ತಾವನೆ :

ಡಾ॥ ಎಂ. ಸಿ. ವಿಜಯ, ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ರೋಣೂರು, ಕೋಲಾರ ಜಿಲ್ಲೆ, ಇವರನ್ನು ಸೇವಾನಿರತ ವೈದ್ಯರ ಕೋಟಾದಲ್ಲಿ ಮೊದಲ ಬಾರಿಗೆ ಡಿಪ್ಲೊಮ ಇನ್ ಗೈನಕಾಲಜಿ ವಿಷಯದಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ವೈದೇಹಿ ವೈದ್ಯಕೀಯ ಸಂಸ್ಥೆ, ಬೆಂಗಳೂರು ಇಲ್ಲಿಗೆ ಮೇಲೆ ಓದಲಾದ ಕ್ರಮಾಂಕ (1)ರ ಅಧಿಸೂಚನೆಯಲ್ಲಿ ಕೆಲವೊಂದು ಷರತ್ತುಗಳೊಂದಿಗೆ ನಿಯೋಜಿಸಲಾಗಿತ್ತು. ಇದರನ್ವಯ ಸದರಿ ವೈದ್ಯರು ದಿನಾಂಕ 06–07–2009 ರಂದು ವ್ಯಾಸಂಗಕ್ಕೆ ಹಾಜರಾಗಿರುತ್ತಾರೆ. ಆದರೆ, ವೈಯಕ್ತಿಕ ಕಾರಣದಿಂದ ವ್ಯಾಸಂಗವನ್ನು ಮುಂದುವರಿಸಲು ಸಾಧ್ಯವಾಗದೇ ಇದ್ದುದರಿಂದ ಈ ವ್ಯಾಸಂಗವನ್ನು ಮೊಟಕುಗೊಳಿಸಿದ್ದಾರೆ. ಇದರಿಂದ ಕರಾರು ಪತ್ರ ಹಾಗೂ ನಿಯಮಾನುಸಾರ ಸರ್ಕಾರಕ್ಕೆ ಮತ್ತು ಖಾಸಗಿ

ಕಾಲೇಜಿಗೆ ಸಂದಾಯಮಾಡಬೇಕಾಗಿರುವ ದಂಡದ ಮೊತ್ತ ಮತ್ತು ಇತರ ಶುಲ್ಕವನ್ನು ಸಂದಾಯ ಮಾಡಿರುವುದರಿಂದ ಹಾಗೂ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿರುವ ಮೊತ್ತವನ್ನು ಪಾವತಿ ಮಾಡಲು ಒಪ್ಪಿರುವುದರಿಂದ ಇವರು ಉನ್ನತ ವ್ಯಾಸಂಗವನ್ನು ಮೊಟಕುಗೊಳಿಸಲು ಅನುಮತಿ ನೀಡಿ ಸ್ಥಳನಿಯುಕ್ತಿಗೊಳಿಸುವಂತೆ ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಕೋರಿದ್ದಾರೆ.

ಸದರಿ ವೈದ್ಯರು ಸೇವಾನಿರತ ಕೋಟಾದಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸಿದಾಗ ಬರೆದುಕೊಟ್ಟ ಕರಾರು ಪತ್ರಗಳು ಮತ್ತು Karnataka Conduct of Entrance Test for selection and admission to Post Graduate Medical and Dental Degree and Diploma Courses Rules-2006 ರಲ್ಲಿರುವ ಷರತ್ತುಗಳಿಗೆ ಅನುಗುಣವಾಗಿ ಈ ಪ್ರಕರಣವನ್ನು ಪರಿಶೀಲಿಸಿ, ಇವರು ಸ್ನಾತಕೋತ್ತರ ವ್ಯಾಸಂಗವನ್ನು ಮೊಟಕುಗೊಳಿಸಲು ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 546 ಹೆಚ್‌ಎಸ್‌ಹೆಚ್ 2009, ಬೆಂಗಳೂರು, ದಿನಾಂಕ: 20ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಎಂ. ಸಿ. ವಿಜಯ, ವೈದ್ಯಾಧಿಕಾರಿ, ಇವರು ಕೆಳಕಂಡ ಷರತ್ತುಗಳಿಗೆ ಅನುಗುಣವಾಗಿ ಸೇವಾನಿರತ ಕೋಟಾದಲ್ಲಿ ಸ್ನಾತಕೋತ್ತರ ವ್ಯಾಸಂಗವನ್ನು ಮೊಟಕುಗೊಳಿಸಲು ಸರ್ಕಾರವು ಅನುಮತಿ ನೀಡಿದೆ.

1) ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳುವ ಸಮಯದಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಗೆ ಸಂದಾಯ ಮಾಡಿರುವ ರೂ. 25,000/–ಗಳನ್ನು ದಂಡವನ್ನಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಖಾಸಗಿ ಕಾಲೇಜಿಗೆ ಸ್ನಾತಕೋತ್ತರ ವ್ಯಾಸಂಗಕ್ಕೆ ಸಂದಾಯ ಮಾಡಿದ ಫೀ ಗೆ ಸಮಾನಾಂತರವಾದ ಮೊತ್ತವನ್ನು ಪ್ರತಿ ತಿಂಗಳ ಅವರ ಸಂಬಳದಲ್ಲಿ ಕಟಾಯಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಯುಕ್ತರಿಗೆ ನಿರ್ದೇಶಿಸಿದೆ.
2) ಸದರಿ ವೈದ್ಯರನ್ನು ಮುಂದಿನ ಮೂರು ಶೈಕ್ಷಣಿಕ ವರ್ಷಗಳ ಕಾಲಾವಧಿಯಲ್ಲಿ ಸೇವಾನಿರತ ಕೋಟಾದಲ್ಲಿ ಸ್ನಾತಕೋತ್ತರ/ಡಿಪ್ಲೊಮ ಪ್ರವೇಶ ಪರೀಕ್ಷೆ ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ.
3) ಸ್ನಾತಕೋತ್ತರ ವ್ಯಾಸಂಗಕ್ಕೆ ಹಾಜರಾದ ದಿನಾಂಕದಿಂದ ಪುನಃ ನೇಮಕಾತಿ ಮಾಡಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದವರೆಗಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆ ಅಥವಾ ರಜೆ ಇಲ್ಲದಿದ್ದಲ್ಲಿ ಅಸಾಧಾರಣ ರಜೆ ಮಂಜೂರು ಮಾಡಿ ಸಕ್ರಮಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತರಿಗೆ ಸೂಚಿಸಿದೆ.

ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆಯಲ್ಲಿದ್ದ ಡಾ॥ ಸಿ ಇ. ರವಿಪ್ರಕಾಶ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 639 ಹೆಚ್‌ಎಸ್‌ಹೆಚ್ 2009 ದಿನಾಂಕ 08–02–2010 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸುಗಟೂರು, ಕೋಲಾರ ಜಿಲ್ಲೆ ಇಲ್ಲಿಗೆ ಸ್ಥಳನಿಯುಕ್ತಿ ಮಾಡಲಾಗಿದ್ದು, ಇವರು ನೇಮಕ ಮಾಡಲಾದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗದಿರುವುದರಿಂದ ಈ ಸ್ಥಳನಿಯುಕ್ತಿ ಅದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ಡಾ॥ ಎಂ. ಸಿ. ವಿಜಯ, ವೈದ್ಯಾಧಿಕಾರಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸುಗಟೂರು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

ಸದರಿ ವೈದ್ಯರು ನೇಮಕ ಮಾಡಿದ ಹುದ್ದೆಯಲ್ಲಿ ಹಾಜರಾಗಿ ಸಂಬಂಧಪಟ್ಟ ಎಲ್ಲರಿಗೂ ಸಿ.ಟಿ.ಸಿ.ಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಐ. ಹೇಮನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಸೇವೆಗಳು–1)

ಪಿ.ಆರ್. 878

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಎಸ್‌ಜಿಎಸ್‌ವೈ ಲೆಕ್ಕ ಶೀರ್ಷಿಕೆ 2501-01-198-6-01 ಯಡಿ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಭರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶದ ಸಂಖ್ಯೆ ಎಫ್‌ಡಿ 9 ಟಿಎಫ್‌ಪಿ 2005, ದಿನಾಂಕ 07-04-2005

ಪ್ರಸ್ತಾವನೆ :

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀರ್ಷಿಕೆ 2501-01-198-6-01 ಯಡಿ 2009-2010ನೆ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ. 2468.15 ಲಕ್ಷಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಿದೆ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ರಾಜ್ಯವು ಕೇಂದ್ರದ ಪಾಲಿನ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಬೆಳಗಾಂ, ಚಿತ್ರದುರ್ಗ, ದಕ್ಷಿಣ ಕನ್ನಡ, ಗದಗ್, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಲ್ಲಿ ಉಳಿಯಬಹುದಾದ ರೂ. 54,79,000 ಅನುದಾನವನ್ನು ಪನರ್ವಿನಿರ್ಯೋಗದ ಮೂಲಕ ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಪಂಚಾಯತಿಗಳಿಗೆ ನೀಡಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 8 ಎಸ್‌ಜೆವೈ 2010, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 2010

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀಷಿಕೆ 2501-01-198-6-01 ಯಡಿ 2009-2010ನೇ ಸಾಲಿಗೆ ರಾಜ್ಯ ಸರ್ಕಾರವು ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಪಂಚಾಯತ್‌ಗೆ ಅಗತ್ಯವಿರುವ ರೂ. 54,79,000 ಗಳನ್ನು (ರೂ. ಐವತ್ತ ನಾಲ್ಕು ಲಕ್ಷದ ಎಪ್ಪತ್ತೊಂಬತ್ತು ಸಾವಿರ ಮಾತ್ರ) ಪನರ್ವಿನಿಯೋಗದ ಮೂಲಕ ಭರಿಸಲು ಮಂಜೂರಾತಿ ನೀಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಡಿಎಫ್‌ಪಿ 2005 ದಿನಾಂಕ 07-04-2005ರಲ್ಲಿ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪಿ. ರವಿಕುಮಾರ್)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶಾಖೆ : ಸ್ವಯಂ ಉದ್ಯೋಗ ಕಾರ್ಯಕ್ರಮ ಯೋಜನೆ : ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚಿನ ಹಂಚಿಕೆ (ಅಲಾಟ್‌ಮೆಂಟ್) ಗಳಲ್ಲಿ ಉಪಬಂಧ ಕಲ್ಪಿಸಿಲ್ಲದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸಬೇಕಾದ ಪುನರ್ವಿಯೋಗದ ವಿವರಣೆ

ವರ್ಷ : 2009–10 (ರೂ. ಲಕ್ಷಗಳಲ್ಲಿ)

ಮುಂಗಡ ಪತ್ರದ ಪ್ರಧಾನ ಚಿಕ್ಕ ಉಪ ವಿವರವಾದ ಶೀರ್ಷಿಕೆಗಳು 2501–ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01–ಸಮಗ್ರ ಗ್ರಾಮಿಣಾಭಿವೃದ್ಧಿಗಾಗಿ ಕಾರ್ಯಕ್ರಮಗಳು 198–ಗ್ರಾಮಪಂಚಾಯತ್‌ಗಳಿಗೆ ಸಹಾಯ 6–ಗ್ರಾಮಪಂಚಾಯತ್ 01–ಬ್ಲಾಕ್ ಅನುದಾನ (ಯೋಜನೆ) ಎಸ್‌ಜಿಎಸ್‌ವೈ			ಹೆಚ್ಚಿಸಲು ಪ್ರಸ್ತಾವಿಸಲಾದ ಆಂದಾಜಿನ ಶೀರ್ಷಿಕೆ 2501–01–198–6–01				ಕಡಿಮೆ ಮಾಡಲು ಪ್ರಸ್ತಾವಿಸಲಾದ ಆಂದಾಜಿನ ಶೀರ್ಷಿಕೆ 2501–01–198–6–01				ಷರಾ ಹಣ ಹಂಚಿಕೆ (ಅಲಾಟ್‌ಮೆಂಟ್) ಮೀರಿರುವುದಕ್ಕೆ ಮತ್ತು ಉಳಿತಾಯ ನಿರೀಕ್ಷಿಸುವುದಕ್ಕೆ ಕಾರಣಗಳನ್ನು ಇಲ್ಲಿ ಪೂರ್ಣವಾಗಿ ವಿವರಿಸಿಬೇಕು.
	ಜಿಲ್ಲಾ ಕೋಡ್	ಜಿಲ್ಲಾ ಪಂಚಾಯತ್	ಮಂಜೂರಾದ ಆಯವ್ಯಯ ಅಂದಾಜಿನಲ್ಲಿರುವ ಮೊತ್ತ	ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ)	ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ	ಬೇಕಾದ ಹೆಚ್ಚಿನ ಅಲಾಟ್‌ಮೆಂಟ್ ವಿವರ	ಮಂಜೂರಾದ ಆಯವ್ಯಯ ಅಂದಾಜಿನಲ್ಲಿರುವ ಮೊತ್ತ	ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ)	ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ	ಪುನರ್ವಿನಿಯೋಗಕ್ಕೆ ಲಭ್ಯವಿರುವ ಮೊತ್ತ	
		೧	೨	೩	೪	೫	೬	೭	೮	೯	೧೦
	402	ಬೆಂಗಳೂರು ಗ್ರಾ	17.00	25.87	3.57	12.44					ಬೆಂಗಳೂರು ಗ್ರಾ ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಜಿ.ಪಂ.ಗಳಿಗೆ ರಾಜ್ಯದ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಕೊರತೆಯಿದೆ. ಈಗಾಗಲೇ ರಾಜ್ಯದ ಪಾಲಿನ ಬಂದನೇ ಕಂತಿನ ಭಾಗಶಃ ಅನುದಾನ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿದೆ. ಇದನ್ನು ಸರಿದೂಗಿಸಲು ಹಾಗೂ ಕೋಲಾರ ಜಿ.ಪಂ. ಹೊರತು ಪಡಿಸಿ ಉಳಿದ 3 ಜಿ.ಪಂಗಡಗಳಿಗೆ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಒಂದನೇ ಕಂತಿನ ಉಳಿಕೆ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ನೀಡಬೇಕಾಗಿರುವುದರಿಂದ ಹೆಚ್ಚಿನ ಅನುದಾನ ಬೇಕಾಗಿರುತ್ತದೆ.
	452	ರಾಮನಗರ	17.00	2556	6.39	14.95					
	453	ಚಿಕ್ಕಬಳ್ಳಾಪುರ	35.47	41.92	7.05	13.50					
	404	ಕೋಲಾರ	45.60	59.50	0	13.90					
			115.07	**152.85**	**17.01**	**54.79**					
	413	ಬೆಳಗಾಂ					186.43	142.45	–	43.98	ಬೆಳಗಾಂ, ಚಿತ್ತದುರ್ಗ, ದ.ಕನ್ನಡ, ಗದಗ, ಉಡುಪಿ, ಉ.ಕನ್ನಡ ಜಿ.ಪಂ.ಗಳಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ ಅನುದಾನದಂತೆ ಬಿಡುಗಡೆ ಮಾಡಿರುವುದಿಲ್ಲ. ಕೇಂದ್ರ ಸರ್ಕಾರ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಾಗ 01–04–09ಕ್ಕೆ ಹೆಚ್ಚಿಗೆ ಇರುವ ಆರಂಭ ಶಿಲ್ಕು ರಾಜ್ಯದ ಪಾಲು ಕಡಿಮೆ ಬಿಡುಗಡೆ, ತಡವಾಗಿ ಪ್ರಸ್ತಾವನೆ ಸಲ್ಲಿಕೆ ಇತ್ಯಾದಿ ಕಾರಣಗಳಿಗಾಗಿ ಕಡಿತಗೊಳಿಸಿದ್ದು, ಇದಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆಗೊಳಿಸಿ ಉಳಿದ ಅನುದಾನವನ್ನು ಪುನರ್ವಿನಿಯೋಗಕ್ಕೆ ಬಳಸಿಕೊಳ್ಳಲಾಗುವುದು.
	403	ಚಿತ್ರದುರ್ಗ					105.00	103.10	–	1.90	
	409	ದ.ಕನ್ನಡ					57.35	54.99	–	2.36	
	462	ಗದಗ್					84.32	82.98	–	1.34	
	457	ಉಡುಪಿ					40.00	38.64	–	1.36	
	416	ಉತ್ತರ ಕನ್ನಡ					66.16	62.14	0.17	3.85	
		ಒಟ್ಟು					**539.26**	**484.30**	**0.17**	**54.79**	

(ಪಿ. ರವಿಕುಮಾರ)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. ನಂ. 879

ಒಳಾಡಳಿತ ಸಚಿವಾಲಯ

ವಿಷಯ : ಪ್ರಜಾಪಥ ಪತ್ರಿಕೆ ಸಂಪಾದಕರಾದ ಶ್ರೀ ಬ್ರಹ್ಮಾನಂದ ರೆಡ್ಡಿ, ಬೆಂಗಳೂರು ಎಂಬ ವ್ಯಕ್ತಿ ಸುಳ್ಳು ವಿಳಾಸ ನೀಡಿ ಸದರಿ ಪತ್ರಿಕೆಯನ್ನು ನೋಂದಣಿ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳು ಮತ್ತು ಅಮಾಯಕರನ್ನು ಶೋಷಣೆ ಮಾಡುತ್ತಿರುವ ಬಗ್ಗೆ ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊ.ಸಂ. 147/07 ಮತ್ತು 149/2007ನ್ನು ಸಿ.ಐ.ಡಿ.ಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : ಪೊಲೀಸ್ ಮಹಾ ನಿರ್ದೇಶಕರು, ಸಿ.ಐ.ಡಿ. ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಇವರ ಪತ್ರ ಸಂ. 7/ಅಪರಾಧ/ಎಸ್‌ಇ/ಸಿಐಡಿ/2010 ದಿನಾಂಕ 08-03-2010.

ಪ್ರಸ್ತಾವನೆ :

ಪ್ರಜಾಪಥ ಪತ್ರಿಕೆ ಸಂಪಾದಕರಾದ ಶ್ರೀ ಬ್ರಹ್ಮಾನಂದ ರೆಡ್ಡಿ, ಬೆಂಗಳೂರು ಎಂಬ ವ್ಯಕ್ತಿ ಸುಳ್ಳು ವಿಳಾಸ ನೀಡಿ ಸದರಿ ಪತ್ರಿಕೆಯನ್ನು ನೋಂದಣಿ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳು ಮತ್ತು ಅಮಾಯಕರನ್ನು ಶೋಷಣೆ ಮಾಡುತ್ತಿರುವ ಬಗ್ಗೆ ಸಿ.ಐ.ಡಿ., ತನಿಖೆ ನಡೆಸಲು ಸರ್ಕಾರವು ತೀರ್ಮಾನಿಸಿದ್ದು ಮೇಲೆ ಓದಲಾದ ಪತ್ರದಲ್ಲಿ ಪೊಲೀಸ್ ಮಹಾ ನಿರ್ದೇಶಕರು, ಸಿ.ಐ.ಡಿ. ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಇವರು ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊ.ಸಂ. 147/07 ಮತ್ತು 149/2007ನ್ನು ಸಿ.ಐ.ಡಿ.ಗೆ ವರ್ಗಾಯಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ ಒಇ 45 ಸಿಐಡಿ 2010, ಬೆಂಗಳೂರು, ದಿನಾಂಕ : 9-04-2010

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಜಾಪಥ ಪತ್ರಿಕೆ ಸಂಪಾದಕರಾದ ಶ್ರೀ ಬ್ರಹ್ಮಾನಂದ ರೆಡ್ಡಿ, ಬೆಂಗಳೂರು ಎಂಬ ವ್ಯಕ್ತಿ ಸುಳ್ಳು ವಿಳಾಸ ನೀಡಿ ಸದರಿ ಪತ್ರಿಕೆಯನ್ನು ನೋಂದಣಿ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳು ಮತ್ತು ಅಮಾಯಕರನ್ನು ಶೋಷಣೆ ಮಾಡುತ್ತಿರುವ ಬಗ್ಗೆ ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ಕಲಂ 447, 384, 504, 506 ಐಪಿಸಿ ಮತ್ತು ಕಲಂ 384 ಐಪಿಸಿ ಅಡಿಯಲ್ಲಿ ದಾಖಲಾಗಿರುವ ಮೊ.ಸಂ. 147/07 ಮತ್ತು 149/07ನ್ನು ಸಿ.ಐ.ಡಿ. ಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಮೊಕದ್ದಮೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಿ.ಐ.ಡಿ.ಗೆ ಹಸ್ತಾಂತರಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ತುಮಕೂರು ಇವರು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1029

ಪಿ. ಶಿವರಾಮ ಭಟ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಅಪರಾಧಗಳು)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : RIDF-XIV ರಡಿ ಅನುಮೋದನೆಗೊಂಡು RIDF-XV ರಡಿ ಹೆಚ್ಚುವರಿ ಸಾಲ ಮಂಜೂರಾತಿಯಾಗಿರುವ 5 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಮಾರ್ಪಡಿಸಿದ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :

1. ದಿನಾಂಕ : 25-09-2008ರ ನಬಾರ್ಡ್ ಸಂಸ್ಥೆಯು ಪತ್ರಸಂಖ್ಯೆ :NB.SPD/ RIDF-XIV(Karnataka)/99PSC/2008-09
2. ಸರ್ಕಾರದ ಆದೇಶ ಸಂಖ್ಯೆ : ಸನೀಇ 10 ನಯೋಕಾ 2007, ದಿನಾಂಕ : 29-01-2009.
3. ದಿನಾಂಕ : 29-01-2009ರ ನಬಾರ್ಡ್ ಸಂಸ್ಥೆಯ ಪತ್ರಸಂಖ್ಯೆ : NB.SPD/2425/RIDF-XIV(Karnataka RO)/101 PSC/2008-09
4. ಸರ್ಕಾರದ ಆದೇಶ ಸಂಖ್ಯೆ : ಸನೀಇ 02 ನಯೋಕಾ 2009, ದಿನಾಂಕ : 05-02-2009.
5. ದಿನಾಂಕ : 05-04-2010ರ ನಬಾರ್ಡ್ ಸಂಸ್ಥೆಯು ಪತ್ರಸಂಖ್ಯೆ : NB.SPD/22/RIDF-XV(Karnataka RO)/109 PSC/2010-11

ಪ್ರಸ್ತಾವನೆ :

ಕ್ರಮಾಂಕ 1ರಲ್ಲಿ ಓದಲಾದ ನಬಾರ್ಡ್ ಸಂಸ್ಥೆಯ ಪತ್ರದಲ್ಲಿ ರೈತರ ವಿಶೇಷ ಪ್ಯಾಕೇಜಿನ ಆರ್.ಐ.ಡಿ. ಎಫ್-14 ರಡಿ ರೂ. 3172.90 ಲಕ್ಷ ಅಂದಾಜು ಮೊತ್ತದ 74 ಕಾಮಗಾರಿಗಳ ಅಂದಾಜುಗಳಿಗೆ ಒಟ್ಟು ರೂ. 3014.37 ಲಕ್ಷ ಸಾಲ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ. ಈ 74 ಕಾಮಗಾರಿಗಳ ಪೈಕಿ ಕೆಳಕಂಡ ತಃಖ್ತೆಯಲ್ಲಿ ನೀಡಿರುವ ಕ್ರಮಾಂಕ 1 ರಿಂದ 4ರ ವರೆಗಿನ ಕಾಮಗಾರಿಗಳು ಒಳಗೊಂಡಿರುತ್ತವೆ. ಕ್ರಮಾಂಕ 2 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ 4 ಕಾಮಗಾರಿಗಳು ಸೇರಿದಂತೆ ಒಟ್ಟು 98 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕ್ರಮಾಂಕ 3ರಲ್ಲಿ ಓದಲಾದ ನಬಾರ್ಡ್ ಸಂಸ್ಥೆಯ ಪತ್ರದಲ್ಲಿ ಆರ್.ಐ.ಡಿ. ಎಫ್–14 ರಡಿ ರೂ. 14477.85 ಲಕ್ಷ ಅಂದಾಜು ಮೊತ್ತದ 260 ಕಾಮಗಾರಿಗಳ ಅಂದಾಜುಗಳಿಗೆ ಒಟ್ಟು ರೂ. 13754.17 ಲಕ್ಷ ಸಾಲ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ. ಈ 260 ಕಾಮಗಾರಿಗಳ ಪೈಕಿ ಕೆಳಕಂಡ ತಃಖ್ತೆಯಲ್ಲಿ ನೀಡಿರುವ ಕ್ರಮಾಂಕ 5 ರಲ್ಲಿನ ಕಾಮಗಾರಿಯು ಒಳಗೊಂಡಿರುತ್ತದೆ. ಕ್ರಮಾಂಕ 4 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಕಾಮಗಾರಿಗಳು ಸೇರಿದಂತೆ ಒಟ್ಟು 260 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ವಿನ್ಯಾಸ ಹಾಗೂ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ವಾಸ್ತವಿಕ ಅಂದಾಜು ಮೊತ್ತದಲ್ಲಿ ಹೆಚ್ಚಳ ಉಂಟಾಗಿರುತ್ತದೆ. ಈ ಕಾರಣಗಳಿಂದಾಗಿ ಮಾರ್ಪಡಿತ ಅಂದಾಜುಗಳನ್ನು ತಯಾರಿಸಿ ಹೆಚ್ಚುವರಿ ಸಾಲ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ನಬಾರ್ಡ್ ಸಂಸ್ಥೆಗೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಕ್ರಮಾಂಕ 5 ರಲ್ಲಿ ಓದಲಾದ ನಬಾರ್ಡ್ ಸಂಸ್ಥೆಯ ಪತ್ರದಲ್ಲಿ ಈ 5 ಕಾಮಗಾರಿಗಳಿಗೆ ಆರ.ಐ.ಡಿ.ಎಫ್.–15 ರಡಿ ಹೆಚ್ಚುವರಿ ಸಾಲ ಮಂಜೂರಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.

ರೂ. ಲಕ್ಷಗಳಲ್ಲಿ

Sl. No.	Name of the Work	RO Code	Original Estimate cost	Original Loan	Modified estimate cost	Total Loan
1.	Providing LIS from Tunga river near Beguvalli village in Thirthahalli Taluk, Shimoga District	I140044	105.00	99.75	161.00	152.95
2.	Providing LIS from Malathi river to Heggodu village in Thirthahalli Taluk, Shimoga District	I 140045	131.00	124.45	144.00	136.80
3.	Providing LIS from Tunga river to Untoorakatte Kaimara village in Thirthahalli Taluk, Shimoga District	I 140043	102.00	96.90	111.00	105.45
4.	Providing LIS from Tunga river near Kasaravalli village in Thirthahalli Taluk, Shimoga District	I 140046	103.00	97.85	145.00	137.75
5.	Construction of BCB across Kumudvathi river near Hithala village in Shikaripura Taluk, Shimoga District	I 140350	116.00	110.20	152.00	144.40
	Total		**557.00**	**529.15**	**713.00**	**677.35**

ಮೇಲ್ಕಂಡ 5 ಕಾಮಗಾರಿಗಳಿಗೆ ಈ ಹಿಂದೆ ನೀಡಿದ್ದ ಆಡಳಿತಾತ್ಮಕ ಅನುಮೋದನೆ ರದ್ದುಗೊಳಿಸಿ ಮಾರ್ಪಡಿತ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಅದೇಶ ಸಂಖ್ಯೆ : ಸನೀಇ 06 ನಯೋಕ 2009, ಬೆಂಗಳೂರು, ದಿನಾಂಕ : 16ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲ್ಕಂಡ ರೂ. 713.00 ಲಕ್ಷ (ರೂ. ಏಳು ನೂರ ಹದಿಮೂರು ಲಕ್ಷ ಮಾತ್ರ) ಅಂದಾಜು ಮೊತ್ತವುಳ್ಳ 5 ಕಾಮಗಾರಿಗಳ ಮಾರ್ಪಡಿತ ಅಂದಾಜುಗಳಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ತಾಂತ್ರಿಕ ಮಂಜೂರಾತಿಯನ್ನು ಸೂಕ್ತವಾದ ಲೆಕ್ಕಶೀರ್ಷಿಕೆ/ಉಪ ಲೆಕ್ಕಶೀರ್ಷಿಕೆಯಡಿ ನೀಡುವುದು. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪ್ರಸ್ತಾವನೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4. ಕಾಮಗಾರಿಯ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಸಣ್ಣ ನೀರಾವರಿ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಅಥವಾ ಮುಖ್ಯ ಇಂಜಿನಿಯರ್‌ಗಳ ನೇತೃತ್ವದಲ್ಲಿ ಇರುವ ತಾಂತ್ರಿಕ ಸಮಿತಿಯ ತೀರುವಳಿಯನ್ನು ನಿಯಮಾನುಸಾರ ಪಡೆಯುವುದು.

5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6. ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
7. ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
8. ಇ.ಐ.ಆರ್.ಎಲ್./ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10. ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1030

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ಶಿಗ್ಗಾಂ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸುವ ಕುರಿತು.

ಓದಲಾಗಿದೆ :
1. ಜಲಸಂಪನ್ಮೂಲ ಇಲಾಖೆಯ ಕಡತ ಸಂಖ್ಯೆ : ಜಸಂಇ 45 ಎಂಪಿಎಸ್ 09
2. ಪತ್ರ ಸಂಖ್ಯೆ : ಮುಇಂ/ಸನೀ(ಉ)ವಲಯ/ಬಿಜೆಪಿ/ಎಜಿ–3/2009–10/1506 ದಿನಾಂಕ : 11–03–2010

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ಶಿಗ್ಗಾಂ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳಾದ ರೆಡ್ಡಿಕೆರೆ, ಕಮತಗೇರಿ ಕೆರೆ, ನೀರಲಗಿ ಕೆರೆ, ತಿಮ್ಮಾಪುರ ಕೆರೆ ಮತ್ತು ಹಿರೇಬೆಂಡಿಗೇರಿ ಕೆರೆಗಳನ್ನು ರೂ. 336.00 ಲಕ್ಷಗಳ ವೆಚ್ಚದಲ್ಲಿ ಕರ್ನಾಟಕ ನೀರಾವರಿ ನಿಗಮದ ವತಿಯಿಂದ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದ್ದು ಈ ಕಾಮಗಾರಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡುವ ಸಲುವಾಗಿ ಸದರಿ ಕೆರೆಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸುವಂತೆ ಕೋರಿ ಜಲಸಂಪನ್ಮೂಲ ಇಲಾಖೆಯು ಸಣ್ಣ ನೀರಾವರಿ ಇಲಾಖೆಯನ್ನು ಮೇಲೆ (1)ರಲ್ಲಿ ಓದಲಾದ ಕಡತದಲ್ಲಿ ಪ್ರಸ್ತಾಪಿಸಿದೆ.

ಹಾವೇರಿ ಜಿಲ್ಲೆ, ಶಿಗ್ಗಾಂ ತಾಲ್ಲೂಕಿನ ನೀರಲಗಿ ಗ್ರಾಮದ ರೆಡ್ಡಿಕೆರೆ, ಕಮತಗೇರಿ ಕೆರೆ, ಹೆಗ್ಗೇರಿಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸಣ್ಣ ನೀರಾವರಿ ಇಲಾಖೆಯಿಂದ ಈ ಕೆರೆಗಳ ಸುಧಾರಣೆ ಕಾಮಗಾರಿ ಮಾಡುತ್ತಿದ್ದು, ಕಾಮಗಾರಿ ಮುಗಿದ ನಂತರ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲು ಹಾಗೂ ತಿಮ್ಮಾಪುರ ಕೆರೆ ಹಾಗೂ ಹಿರೇಬೆಂಡಿಗೇರಿ ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸಲ್ಲಿಸಿರುವ ವರದಿಯಲ್ಲಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಹಸ್ತಾಂತರಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 69 ಕೆಜಿದು 2009, ಬೆಂಗಳೂರು, ದಿನಾಂಕ : 16–04–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆ, ಶಿಗ್ಗಾಂ ತಾಲ್ಲೂಕಿನ ನೀರಲಗಿ ಗ್ರಾಮದ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರೆಡ್ಡಿಕೆರೆ, ಕಮತಗೇರಿ ಕೆರೆ ಮತ್ತು ಹೆಗ್ಗೇರಿ ಕೆರೆಗಳನ್ನು ಹಾಲಿ ಇರುವ ಸುಧಾರಣೆ ಕಾಮಗಾರಿಗಳನ್ನು ಸ್ಥಗಿತಗೊಳಿಸುವ ಮೂಲಕ ಅಭಿವೃದ್ಧಿಪಡಿಸುವ ಸಲುವಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲು ಅನುಮೋದನೆ ನೀಡಿದೆ.

1. ಹಾಲಿ ಇರುವ ಕೆರೆಯ ಅಚ್ಚುಕಟ್ಟುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.
2. ಕೆರೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವಾಗ ಕೆರೆಯ ಏರಿ, ತೂಬು, ಕೋಡಿಯ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ವಿನ್ಯಾಸ ಮತ್ತು ಮಾರ್ಪಾಟುಗಳ ಕಾರ್ಯನಿರ್ವಹಿಸುವುದು.
3. ಕೆರಯನ್ನು ಯಾವುದೇ ಆರ್ಥಿಕ ಲಾಭಕ್ಕೆ ಬಳಸಿಕೊಳ್ಳಬಾರದು.
4. ಈ ಕೆರೆಯ ಮೂಲ ಸ್ವರೂಪಕ್ಕೆ ಧಕ್ಕೆಯಾದಲ್ಲಿ ಅದರ ವೆಚ್ಚವನ್ನು ಭರಿಸತಕ್ಕದ್ದು.
5. ಈ ಕೆರೆಗಳ ಒತ್ತುವರಿಯಾಗಿದ್ದಲ್ಲಿ, ಒತ್ತುವರಿಯನ್ನು ತಡೆಗಟ್ಟಲು ಹಾಗೂ ತೆರವುಗೊಳಿಸಲು ನಿಗಮವು ಕಾನೂನು ಕ್ರಮ ತೆಗೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1031

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾತ್ಕಾಲಿಕ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 138 ಸಆಸೇ 2009, ದಿನಾಂಕ : 30–03–2009

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ : ಐಟಿಡಿ 16 ಡಿಐಎಸ್ 2010, ದಿನಾಂಕ : 27–03–2010

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 30–03–2009ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 01–4–2009 ರಿಂದ ಒಂದು ವರ್ಷದವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ 2ರಲ್ಲಿ ಓದಲಾದ ಪತ್ರದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ 01–04–2010 ರಿಂದ 31–03–2011 ರವರೆಗೆ ಮುಂದುವರೆಸುವಂತೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೋರಿದ್ದಾರೆ.

1.	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	16 ಹುದ್ದೆಗಳು

ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 184 ಸಅಸೇ 2010 ಬೆಂಗಳೂರು, ದಿನಾಂಕ 12-04-2010

ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 01-04-2010 ರಿಂದ 1 ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ.

1.	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	16 ಹುದ್ದೆಗಳು

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10-07-1996ರಲ್ಲಿ ಪ್ರತ್ಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1032

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/1871/2010 ದಿನಾಂಕ : 27-03-2010.

ಪ್ರಸ್ತಾವನೆ :

ಮೇಲೆ ಓದಲಾದ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಆಸರೆ ಯೋಜನೆ ಅಡಿಯಲ್ಲಿ ಹಲವಾರು ಗ್ರಾಮಗಳಲ್ಲಿ ಮನೆ ನಿರ್ಮಾಣ ಕಾರ್ಯಕ್ಕೆ ನೀರು ಸರಬರಾಜಿಗೆ ವಿದ್ಯುಚ್ಛಕ್ತಿ ಕೊರತೆ ಇರುವುದರಿಂದ ; ನಿರ್ಮಾಣ ಕಾರ್ಯ ಸುಗಮವಾಗಿ ಸಾಗಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಿದ್ಯುಚ್ಛಕ್ತಿ ವ್ಯತ್ಯಯ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಉಪಯೋಗಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಕೆಲವು ಷರತ್ತುಗಳಿಗೆ ಒಳಪಟ್ಟು ಈ ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಗಳು ಅನುಮೋದನೆ ನೀಡಿರುವುದರಿಂದ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 174 ಟಿಎನ್‌ಆರ್ 2010 ಬೆಂಗಳೂರು, ದಿನಾಂಕ 15-04-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಸರೆ ಕಾರ್ಯಕ್ರಮದಡಿಯಲ್ಲಿ ಹಲವಾರು ಗ್ರಾಮಗಳಲ್ಲಿ ಮನೆ ನಿರ್ಮಾಣ ಕಾರ್ಯಕ್ಕೆ ನೀರು ಸರಬರಾಜಿಗೆ ವಿದ್ಯುಚ್ಚಕ್ತಿ ಕೊರತೆ ಇರುವುದರಿಂದ ಮನೆ ನಿರ್ಮಾಣ ಕಾರ್ಯಸುಗಮವಾಗಿ ಸಾಗಲು, ವಿದ್ಯುಚ್ಚಕ್ತಿ ವ್ಯತ್ಯಯ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಉಪಯೋಗಿಸಿಕೊಳ್ಳಲು ಮಂಜೂರಾತಿ ನೀಡಲಾಗಿದೆ.

ಷರತ್ತುಗಳು :

1. ಡೀಸೆಲ್ ಜನರೇಟರ್ ಸೆಟ್‌ಗಳನ್ನು ವಿದ್ಯುತ್ ವ್ಯತ್ಯಯ ಉಂಟಾದಾಗ ಮಾತ್ರ ಉಪಯೋಗಿಸತಕ್ಕದ್ದು.
2. ಡೀಸೆಲ್ ಜನರೇಟರ್ ಸೆಟ್ಟನ್ನು ಆದೇಶ ಹೊರಡಿಸಿದ ದಿನದಿಂದ ಗರಿಷ್ಠ ನಾಲ್ಕು ತಿಂಗಳ ವರೆಗೆ ಅಥವಾ ವಿದ್ಯುಚ್ಚಕ್ತಿ ಸರಬರಾಜು ಆಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಉಪಯೋಗಿಸತಕ್ಕದ್ದು.
3. ಡೀಸೆಲ್ ಜನರೇಟರ್‌ನ ಮಾಸಿಕ ಬಾಡಿಗೆಯು ರೂ. 20,000-00 ಗಳಿಗೆ ಮೀರತಕ್ಕದ್ದಲ್ಲ (ಆಪರೇಟರ್ ಭತ್ಯೆಯನ್ನು ಸೇರಿಸಿ) ಹಾಗೂ ತಿಂಗಳಿಗೆ 250 ಲೀಟರ್ ಡೀಸೆಲ್ ಬಳಕೆಗೆ ಅವಕಾಶ ಇರುತ್ತದೆ. ಡೀಸೆಲ್ ಜನರೇಟರ್ ಸೆಟ್ 20 ಕೆ.ವಿ. ಸಾಮರ್ಥ್ಯ ಮೀರತಕ್ಕದ್ದಲ್ಲ.
4. ಡೀಸೆಲ್ ಜನರೇಟರನ್ನು ಕೇವಲ ಆಸರೆ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
5. ಡೀಸೆಲ್ ಜನರೇಟರ್ ಉಪಯೋಗದ ಖರ್ಚು ವೆಚ್ಚವನ್ನು ಲೆಕ್ಕಶೀರ್ಷಿಕೆ 8235-00-111-0-02 "Public Contributions to the Calamity Relief Fund" ಅಡಿಯಲ್ಲಿ ಭರಿಸತಕ್ಕದ್ದು.
6. ಡೀಸೆಲ್ ಜನರೇಟರನ್ನು ಉಪಯೋಗಿಸಿದ ಬಗ್ಗೆ ಲಾಗ್ ಬುಕ್ ಅನ್ನು ಲೆಕ್ಕದೊಂದಿಗೆ ನಿರ್ವಹಿಸುವುದು.
7. ಅಗತ್ಯತೆಗನುಗುಣವಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲಾಗುವುದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ : ಮುಮಕಾ/1871/2010 ದಿನಾಂಕ : 27-03-2010ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1033

ಟಿ. ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ಕಂದಾಯ ಸಚಿವಾಲಯ

ಆರ್.ಡಿ. : 25 : ಎಟಿಎಸ್ : 2010 ಬೆಂಗಳೂರು, ದಿನಾಂಕ : 13-04-2010

ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 100 ಎಟಿಎಸ್ 2010, ದಿನಾಂಕ : 08-04-2010ರಲ್ಲಿ ಹೊರಡಿಸಲಾದ 26 ಜನ ತಹಶೀಲ್ದಾರರುಗಳ ವರ್ಗಾವಣೆ ಅಧಿಸೂಚನೆಯಲ್ಲಿ ಕ್ರ.ಸಂ. (4)ರಲ್ಲಿ **"ಎಸ್ ರೂಪಾ"** ಎಂಬುದರ ಬದಲಾಗಿ **"ರೂಪಶ್ರೀ. ಎಸ್"** ಎಂದು ಮತ್ತು ಕ್ರ.ಸಂ. (6)ರಲ್ಲಿ ಬಿ.ಎಸ್. ಮಂಜುನಾಥಸ್ವಾಮಿ, **"ತಹಶೀಲ್ದಾರ್, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ"** ಎಂಬುದರ ಬದಲಾಗಿ ಬಿ. ಎಸ್. ಮಂಜುನಾಥಸ್ವಾಮಿ, **"ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು"** ಹಾಗೂ ಕ್ರ.ಸಂ. (26)ರಲ್ಲಿ **"ನಾಗರಾಜ್ ಎಂಬುದರ ಬದಲಾಗಿ ನಾಗರಾಜ್ ಸಿ."** ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1034

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ಆರ್.ಡಿ. : 25 : ಎಟಿಎಸ್ : 2010 ಬೆಂಗಳೂರು, ದಿನಾಂಕ : 13–04–2010

ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 100 ಎಟಿಎಸ್ 2010, ದಿನಾಂಕ : 08–04–2010ರಲ್ಲಿ ಹೊರಡಿಸಲಾದ 12 ಜನ ತಹಶೀಲ್ದಾರರುಗಳ ವರ್ಗಾವಣೆ ಅಧಿಸೂಚನೆಯಲ್ಲಿ ಕ್ರ.ಸಂ. (2)ರಲ್ಲಿ ವರ್ಗಾಯಿಸಿದ ಸ್ಥಳಕ್ಕೆ ಸಂಬಂಧಪಟ್ಟಂತೆ, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು, **"ಶ್ರೀ ಬಿ. ಮಲ್ಲಿಕಾರ್ಜುನ"** ಇವರ ಹುದ್ದೆಗೆ ಬದಲಾಗಿ **"ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಶ್ರೀ ಬಿ. ಎಸ್. ಮಂಜುನಾಥಸ್ವಾಮಿ ಇವರ ಹುದ್ದೆಗೆ"** ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1035

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ENERGY SECRETARIAT

Sub : Change of company's name from M/s Shraddha Constructions & Power Generation Private Limited to M/s Shraddha Energy and Infra Projects Private Limited-reg.

Read : 1. Government Order No : DE 310 NCE 2004 dated : 23-09-2004

2. Letter No : KRED/08/SE & IPPL-EIL/2010/742 dated : 3/12-03-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, approval has been accorded for implementation of 4.8 MW wind power capacity to M/s Shraddha Constructions at Ittegehalli and Haladyamenahalli villages of Chitradurga District (Jogimatti wind zone).

The Registrar of Companies, Maharashtra, Pune has issued a certificate of incorporation for change of company's name from M/s shraddha Constructions & Power Generation private Limited to M/s shraddha Energy and Infra Projects Private Limited vide CIN No : U45209PN2004PTC020022 dated : 01-10-2008.

In the letter read at (2) above, the Managing Director, Karnataka Renewable Energy Development Limited, Bangalore has sent a proposal to Government for change of company's name from M/s Shraddha Constructions & Power Generation Private Limited to M/s Shraddha Energy and Infra Projects Private Limited.

The proposal has been examined in detail and issued the following Order:-

Govt Order No. EN 121 NCE 2010, Bangalore, Dated 3- 5- 2010

Government accords approval for the change of company's name from M/s Shraddha Constructions & Power Generation Private Limited to M/s Shraddha Energy and Infra Projects Private Limited.

The Government has reserved the power to Cancel/modify this Order.

The other terms and conditions of the Government Order No : DE 98 NCE 2000 dated : 10-07-2000 shall IPSO FACTO applicable.

By Order and in the name of the Governor of Karnataka,

(S. J. SAMPATH KUMAR)

Under Secretary to Government,

1228

Energy Department.

ಇಂಧನ ಸಚಿವಾಲಯ

ವಿಷಯ : M/s Greenko Energies Private Limited ಇವರಿಗೆ 6.00 ಮೆಗಾವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್ಇಡಿ/06/ತಗಚಿಕುಪ್ಪೆ ಎಂಹೆಚ್ಎಸ್/2009/3406 ದಿನಾಂಕ : 21/22-10-2009 ಹಾಗೂ ಸಂಖ್ಯೆ : ಕೆಆರ್ಇಡಿ/06/ತಗಚಿಕುಪ್ಪೆ ಕಿ.ಜ.ವಿ/2010/794 ದಿನಾಂಕ : 25-02-2010/19-03-2010.

2. ದಿನಾಂಕ : 26-03-2010 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Greenko Energies Private Limited ಇವರಿಗೆ ಬೆಂಗಳೂರು ನಗರ ಜಿಲ್ಲೆಯ, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಗಚಿಕುಪ್ಪೆ ಗ್ರಾಮದ ಬಳಿ ವೃಷಭಾವತಿ ನದಿಗೆ ಅಡ್ಡಲಾಗಿ 6.00 ಮೆಗಾವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ : 26-03-2010 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Greenko Energies Private Limited ಇವರಿಗೆ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 533 ಎನ್‌ಸಿಇ 2009, ಬೆಂಗಳೂರು, ದಿನಾಂಕ : 3ನೇ ಮೇ 2010

M/s Greenko Energies Private Limited ಇವರಿಗೆ ಬೆಂಗಳೂರು ಜಿಲ್ಲೆಯ, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಗಚಿಕುಪ್ಪೆ ಗ್ರಾಮದ ಬಳಿ ವೃಷಭಾವತಿ ನದಿಗೆ ಅಡ್ಡಲಾಗಿ 6.00 ಮೆಗಾವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (Weir **Latitude :** $12^0$52'30" **Longitude :** $77^0$27'00" Power House-**Latitude :** $12^0$52'10" **Longitude :** $77^0$26'50") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ :-

1. (ಅ) ಈ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.
   (ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
   (ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.
   (ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.
2. (ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.
   (ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.
4. ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.
5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.
6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.
8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.
9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.
13. ಸರ್ಕಾರದ ಆದೇಶದಂತೆ ಪರಷ್ಕರಿಸಿದ ಅರ್ಜಿ ಮತ್ತು ಡಿ.ಪಿ.ಆರ್. ಶುಲ್ಕವನ್ನು ಕ್ರೆಡಲ್‌ಗೆ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಜಿ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

1229

ತೋಟಗಾರಿಕೆ ಸಚಿವಾಲಯ

ವಿಷಯ : ನೂತನ ಯಾದಗಿರಿ ಜಿಲ್ಲೆಗೆ ಹೊಸ ಹುದ್ದೆಗಳನ್ನು ಸೃಜಿಸುವ ಕುರಿತು.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಕಂಇ 71 ಭೂದಾಪು 2009, ದಿ : 23–02–2010

2. ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ : ತೋಇ: ಆ: ಸಿ: ವಿನಿ 1:15:10–11, ದಿನಾಂಕ: 22–04–2010

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮಾದರಿ ರಚನೆ ಅನ್ವಯ ಅವಶ್ಯಕವಿರುವ ಹುದ್ದೆಗಳಲ್ಲಿ ಶೇ. 25ರಷ್ಟು ಹುದ್ದೆಗಳನ್ನು ಸದ್ಯಕ್ಕೆ ಅಡ್–ಹಾಕ್ (Ad-hoc) ಆಧಾರದ ಮೇಲೆ ಸೃಜಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಸಂಬಂಧಪಟ್ಟ ಇಲಾಖೆಗಳು ಈ ಅವಶ್ಯಕತೆ ಇರುವ ಹುದ್ದೆಗಳನ್ನು ಗುರುತಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಿ, ಶೀಘ್ರವೇ ಭರ್ತಿ ಮಾಡಿಕೊಳ್ಳುವಂತೆ ಹಾಗೂ ಈ ಹುದ್ದೆಗಳಿಗೆ ಆಯವ್ಯಯ ಅವಕಾಶವನ್ನು ಸಹ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಆದೇಶವನ್ನು ಹೊರಡಿಸಿದೆ.

ಮೇಲೆ ಓದಲಾದ (2)ರ ತೋಟಗಾರಿಕೆ ನಿರ್ದೇಶಕರ ಪತ್ರದಲ್ಲಿ, ಹೊಸ ಜಿಲ್ಲೆಯಾದ ಯಾದಗಿರಿಗೆ ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡಿದಂತೆ ಕಛೇರಿ ಪ್ರಾರಂಭಿಸಲು ತೋಟಗಾರಿಕೆ

ಉಪನಿರ್ದೇಶಕರು, ಗುಲಬರ್ಗಾರವರು ತೋಟಗಾರಿಕೆ ಉಪನಿರ್ದೇಶಕರು, ಯಾದಗಿರಿ ಕಛೇರಿಗೆ 16 ವಿವಿಧ ವೃಂದದ ಹುದ್ದೆಗಳನ್ನು ಹಾಗು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಯಾದಗಿರಿ ಕಛೇರಿಗೆ 13 ಹುದ್ದೆಗಳನ್ನು ಒಟ್ಟು 29 ಹುದ್ದೆಗಳನ್ನು ಸೃಜಿಸಲು ಕೋರಿದ್ದಾರೆ ಹಾಗೂ ಹೊಸದಾಗಿ ಕಛೇರಿಯನ್ನು ತಕ್ಷಣ ಪ್ರಾರಂಭಿಸಲು ತೋಟಗಾರಿಕೆ ಉಪನಿರ್ದೇಶಕರು (ಜಿಲ್ಲಾ ಪಂಚಾಯತ್), ಯಾದಗಿರಿ ಕಛೇರಿಗೆ ಒಟ್ಟು 7 ಹುದ್ದೆಗಳನ್ನು ಮತ್ತು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ), ಯಾದಗಿರಿ ಕಛೇರಿಗೆ ಒಟ್ಟು 7 ಹುದ್ದೆಗಳನ್ನು ತಕ್ಷಣ ಸೃಜಿಸಲು ಕೋರಿದ್ದಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ತೋಇ 99 ತೋಸೇಪ 2010, ಬೆಂಗಳೂರು, ದಿನಾಂಕ : 7–5–2010

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಗಳ ಹಿನ್ನೆಲೆಯಲ್ಲಿ ಸರ್ಕಾರವು ಪರಿಶೀಲಿಸಿ, ಯಾದಗಿರಿ ಹೊಸ ಜಿಲ್ಲೆಗೆ ಈ ಕೆಳಕಂಡ ಹುದ್ದೆಗಳನ್ನು ಮಂಜೂರಾತಿ ನೀಡಿ ಆದೇಶಿಸಿದೆ.

1) ತೋಟಗಾರಿಕೆ ಉಪನಿರ್ದೇಶಕರು (ಜಿಪ), ಯಾದಗಿರಿ
   (ವೇತನ ಶ್ರೇಣಿ ರೂ. 18150 –26925)
2) ತಾಂತ್ರಿಕ ಸಹಾಯಕರು (ಸಹಾಯಕ ತೋಟಗಾರಿಕೆ ಅಧಿಕಾರಿ)
   (ವೇತನ ಶ್ರೇಣಿ ರೂ. 10800–20025)
3) ವ್ಯವಸ್ಥಾಪಕರು
   (ವೇತನ ಶ್ರೇಣಿ ರೂ. 10800–20025)
4) ಪ್ರಥಮ ದರ್ಜೆ ಸಹಾಯಕ
   (ವೇತನ ಶ್ರೇಣಿ ರೂ. 7275–13350)

ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂಖ್ಯೆ : ಕಂಇ 71 ಭೂದಾಮು 2009, ದಿನಾಂಕ : 23–02–2010 ರ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 1029 ವೆಚ್ಚ–7/2009, ದಿನಾಂಕ : 29–12–2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಆದೇಶವನ್ನು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ರಾಜು)

ಸರ್ಕಾರದ ಅಧೀನ ಕಾರ್ಯದರ್ಶಿ,

1230 ತೋಟಗಾರಿಕೆ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಜಿಲ್ಲಾ ಆಸ್ಪತ್ರೆ, ತುಮಕೂರು ಮತ್ತು ಹಾವೇರಿ ಇಲ್ಲಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಅಕುಕ 84 ಎಂಎಂಇ 2008 ದಿನಾಂಕ 04–02–2010

2. ಪತ್ರ ಸಂಖ್ಯೆ : ವೈಶಿನಿ/ಎಂಇಪಿ (1)16/2009–10 ದಿನಾಂಕ : 17–02–2010

ಪ್ರಸ್ತಾವನೆ :

ತುಮಕೂರು ಮತ್ತು ಹಾವೇರಿಯಲ್ಲಿ ತಲಾ ಒಂದು ನರ್ಸಿಂಗ್ ಶಾಲೆಯನ್ನು 2010–11ನೇ ಸಾಲಿನಿಂದ ಪ್ರಾರಂಭಿಸಲು ಮೇಲೆ(1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸರ್ಕಾರದ ಅನುಮೋದನೆ ನೀಡಲಾಗಿತ್ತು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಮೇಲೆ (2)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಜಿಲ್ಲಾ ಆಸ್ಪತ್ರೆ, ತುಮಕೂರು ಮತ್ತು ಹಾವೇರಿ ಇಲ್ಲಿ ಸರ್ಕಾರಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ತಲಾ ಒಂದು ನರ್ಸಿಂಗ್ ಶಾಲೆಗೆ ಕನಿಷ್ಠ 40 ವಿದ್ಯಾರ್ಥಿಗಳ ಪ್ರವೇಶಮಿತಿ ನಿಗದಿಗೊಳಿಸಿ, ಅದಕ್ಕೆ ಅವಶ್ಯವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವಂತೆ ಹಾಗೂ ಅದಕ್ಕೆ ತಗಲುವ ಅನುದಾನವನ್ನು ಹೊಸದಾಗಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಜಿಲ್ಲಾ ಆಸ್ಪತ್ರೆ, ತುಮಕೂರು ಮತ್ತು ಹಾವೇರಿ ಇಲ್ಲಿ ಸರ್ಕಾರಿ ನರ್ಸಿಂಗ್ ಶಾಲೆಗಳನ್ನು ತಲಾ 40(ನಲವತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ 2010–11ನೇ ಸಾಲಿನಿಂದ ಬೋಧನೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಅಕುಕ15 ಎಂಎಂಇ 2010, ಬೆಂಗಳೂರು, ದಿನಾಂಕ : 16–04–2010

ಜಿಲ್ಲಾ ಆಸ್ಪತ್ರೆ, ತುಮಕೂರು ಮತ್ತು ಜಿಲ್ಲಾ ಆಸ್ಪತ್ರೆ ಹಾವೇರಿ ಇಲ್ಲಿ ತಲಾ ಒಂದು ಸರ್ಕಾರಿ ನರ್ಸಿಂಗ್ ಶಾಲೆಯನ್ನು ತಲಾ 40(ನಲವತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ 2010–11ನೇ ಸಾಲಿನಿಂದ ಪ್ರಾರಂಭಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಸಂಸ್ಥೆಗಳಿಗೆ ಅವಶ್ಯವಿರುವ ಹುದ್ದೆಗಳನ್ನು ಪ್ರಸ್ತುತ ಇಲಾಖೆಯಲ್ಲಿರುವ ಹುದ್ದೆಗಳಿಂದಲೇ ವ್ಯವಸ್ಥಾಪನೆ ಮಾಡಿಕೊಳ್ಳತಕ್ಕದ್ದು.

ಈ ಸಂಸ್ಥೆಗಳಿಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಇಲಾಖೆಯಲ್ಲಿ ಹಾಲಿ ಇರುವ ಸೌಲಭ್ಯಗಳಿಂದಲೇ ಉಪಯೋಗಿಸಿಕೊಳ್ಳತಕ್ಕದ್ದು.

ಈ ಶಾಲೆಗಳಿಗೆ ಹೊಸ ಹುದ್ದೆಗಳನ್ನು ಸೃಜಿಸಲು ಮತ್ತು ಹೆಚ್ಚುವರಿ ಅನುದಾನ ಬಿಡುಗಡೆಗೆ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ.

ಇವುಗಳಿಗೆ ತಗಲುವ ವೆಚ್ಚವನ್ನು 2010–11ನೇ ಸಾಲಿನ ಹೊಸಯೋಜನೆಗಳಾಗಿ ತೆಗೆದುಕೊಂಡು ಆಯವ್ಯಯದಲ್ಲಿ ಇಲಾಖೆಯ ಒಟ್ಟಾರೆ ಯೋಜನಾ ವೆಚ್ಚಮಿತಿಯಲ್ಲಿ ಅವಕಾಶ ಮಾಡಿಕೊಂಡು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 1444 ವೆಚ್ಚ–5/2009 ದಿನಾಂಕ 03–12–2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1041

ವಿ. ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ವೆಂಕಟೇಶ, ಎಚ್.ಸಿ., ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಕಛೇರಿ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು, ಇವರ ಆದೇಶ ಸಂಖ್ಯೆ : ಡಿಇ/ಆರ್7/29/ಡಿಸಿಪಿ(ದ)07 ದಿನಾಂಕ : 02–11–2007
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಆಯುಕ್ತರು, ಆಡಳಿತ, ಬೆಂಗಳೂರು, ಇವರ ಆದೇಶ ಸಂಖ್ಯೆ : 99/ಅಪೀಲು/2007 ದಿನಾಂಕ : 07–05–2008
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 17–02–2009
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2)124/2008–09 ದಿನಾಂಕ : 11–03–2010

ಪ್ರಸ್ತಾವನೆ :

ಶ್ರೀ ವೆಂಕಟೇಶ, ಎಚ್.ಸಿ., ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಕಛೇರಿ, ಬೆಂಗಳೂರು, ಇವರು ಬೆಂಗಳೂರಿನ ತ್ಯಾಗರಾಜನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಚ್ಯುತಿ, ನಿರ್ಲಕ್ಷತನ, ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ನೀವು ತ್ಯಾಗರಾಜನಗರ ಪೊಲೀಸ್ ಠಾಣೆಯಲ್ಲಿ ಠಾಣಾ ಬರಹಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಶ್ರೀ ಎಂ. ವೆಂಕಟೇಶ್, ನಂ : 104/2ಎ, 6ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು, ರವರು ಮೊ.ಸಂ : 43/07 ಕಲಂ 307 ರೆ/ವಿ 34 ಐಪಿಸಿ ಪ್ರಕರಣದ ಪ್ರಮುಖ ಆರೋಪಿ ಎಂದು ಅರಿತು ಅದನ್ನು ದುರುಪಯೋಗಪಡಿಸಿಕೊಂಡು ನ್ಯಾಯಾಲಯದ ಆದೇಶದಂತೆ ಅವರು 15 ದಿನಕ್ಕೊಮ್ಮೆ ಠಾಣೆಗೆ ಹಾಜರಾಗಿ ಸಹಿ ಮಾಡಬೇಕಾಗಿದ್ದು, ಅವರ ಸಹಿಯನ್ನು ಠಾಣೆಯಲ್ಲಿ ಪಡೆಯದೆ ಹಣದ ಆಸೆ ಪಟ್ಟು ಹಾಜರಾತಿ

ಪುಸ್ತಕವನ್ನು ಠಾಣೆಯಿಂದ ಹೊರಗೆ ತೆಗೆದುಕೊಂಡು ಹೋಗಿ ಅವರ ಸಹಿ ಪಡೆದು, ಅವರಿಗೆ ಆರೋಪದಿಂದ ಪಾರು ಮಾಡುವುದಾಗಿ ಭರವಸೆ ನೀಡಿ ಶಿಸ್ತು ಇಲಾಖೆಯಲ್ಲಿರುವ ನೀವು ಅಪರಾಧಿಗಳಿಗೆ ಶಿಕ್ಷೆ ಕೊಡಿಸಲು ಮುಂದಾಗದೇ ಸುಳ್ಳು ಭರವಸೆ ನೀಡಿ ಇಲಾಖೆಗೆ ಅಗೌರವ ಉಂಟು ಮಾಡಿರುವುದು ನಿಮ್ಮ ಕರ್ತವ್ಯದಲ್ಲಿನ ತೀವ್ರತರವಾದ ಕರ್ತವ್ಯಚ್ಯುತಿ, ನಿರ್ಲಕ್ಷತೆ, ದುರ್ವತನೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 02-11-2007ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಆಯುಕ್ತರು (ಆಡಳಿತ) ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 07-05-2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಅದೇಶ ಸಂಖ್ಯೆ : ಒಇ 42 ಪೊಸಿಅ 2009, ಬೆಂಗಳೂರು, ದಿನಾಂಕ : 15ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವೆಂಕಟೇಶ, ಎಚ್. ಸಿ., ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಕಛೇರಿ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1042

ಟಿ. ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಾರ್ಮಿಕ ಸಚಿವಾಲಯ

ವಿಷಯ : ರಾಷ್ಟ್ರೀಯ ವೇತನ ಮಂಡಳಿಯ ಶಿಫಾರಸ್ಸನ್ನು ಜಾರಿಗೊಳಿಸಲು ತ್ರಿಪಕ್ಷೀಯ ಉಸ್ತುವಾರಿ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ :
1. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಅ.ಸ.ಪತ್ರ ಸಂಖ್ಯೆ : ವಿ-24011/1/2009-ಡಬ್ಲ್ಯೂಬಿ, ದಿನಾಂಕ : 16-11-2009.
2. ಕಾರ್ಮಿಕ ಆಯುಕ್ತರ ಪತ್ರ ಸಂಖ್ಯೆ : ಎಂಡಬ್ಲ್ಯೂಎ-2/ಇತರೆ/ಡಬ್ಲ್ಯೂಜೆಎ/ಸಿಆರ್-13/09-10, ದಿನಾಂಕ : 4-3-2010.

ಪ್ರಸ್ತಾವನೆ :

ಭಾರತ ಸರ್ಕಾರವು ದಿನಾಂಕ : 24-05-2007ರ ಅಧಿಸೂಚನೆಯ ಮೂಲಕ Working Journalists & Non-Journalist Newspaper Employees ಗೆ ಸಂಬಂಧಿಸಿದಂತೆ ಎರಡು ರಾಷ್ಟ್ರೀಯ ವೇತನ ಮಂಡಳಿಗಳನ್ನು ರಚಿಸಿದ್ದು, ಈ ವೇತನ ಮಂಡಳಿಗಳ ಶಿಫಾರಸ್ಸುಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ತ್ರಿಪಕ್ಷೀಯ ಉಸ್ತುವಾರಿ ಸಮಿತಿ (Tripartite Monitoring Committee) ಯನ್ನು ರಚಿಸುವಂತೆ ಮೇಲೆ ಓದಲಾದ (1)ರ ಪತ್ರದಲ್ಲಿ ತಿಳಿಸಿದೆ. ಅದರಂತೆ ಮೇಲೆ ಓದಲಾದ (2)ರ ಪತ್ರದಲ್ಲಿ ಕಾರ್ಮಿಕ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಾಇ 117 ಎಲ್ಎಂಡಬ್ಲ್ಯೂ 2009, ಬೆಂಗಳೂರು, ದಿನಾಂಕ : 16-04-2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, Working Journalists & Non-Journalist Newspaper Employees ಗೆ ಸಂಬಂಧಿಸಿದಂತೆ ಭಾರತ ಸರ್ಕಾರವು ರಚಿಸಿರುವ ರಾಷ್ಟ್ರೀಯ ವೇತನ ಮಂಡಳಿಗಳ ಶಿಫಾರಸ್ಸುಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ತ್ರಿಪಕ್ಷೀಯ ಉಸ್ತುವಾರಿ ಸಮಿತಿ (Tripartite Monitoring Committee)ಯನ್ನು ರಚಿಸಲಾಗಿದೆ.

ಕ್ರ.ಸಂ.	ಹೆಸರು	ಪದನಾಮ
ಸರ್ಕಾರದ ಪ್ರತಿನಿಧಿಗಳು		
1.	ಮಾನ್ಯ ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು	ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿಯವರು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು	ಸದಸ್ಯರು
3.	ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ
ಮಾಲೀಕ ವರ್ಗದ ಪ್ರತಿನಿಧಿಗಳು		
1.	ವ್ಯವಸ್ಥಾಪಕ ನಿರ್ದೇಶಕರು, ಇಂಡಿಯನ್ ಎಕ್ಸ್‌ಪ್ರೆಸ್, ನಂ : 2, ಸೆಂಟ್ ಮಾರ್ಕ್ಸ್ ರೋಡ್, ಬೆಂಗಳೂರು-1	ಸದಸ್ಯರು
2.	ವ್ಯವಸ್ಥಾಪಕ ನಿರ್ದೇಶಕರು, ಹಿಂದೂ ನ್ಯೂಸ್ ಪೇಪರ್, ನಂ : 19/211, ಇನ್‌ಫೆಂಟ್ರಿ ರೋಡ್, ಬೆಂಗಳೂರು-1	ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಟೈಮ್ಸ್ ಆಫ್ ಇಂಡಿಯಾ, ನಂ : 40/1, ಎಸ್.ಬಿ. ಟವರ್ಸ್, ಎಂ.ಜಿ. ರೋಡ್, ಬೆಂಗಳೂರು-1	ಸದಸ್ಯರು
4.	ವ್ಯವಸ್ಥಾಪಕ ನಿರ್ದೇಶಕರು, ದ ಪ್ರಿಂಟರ್ಸ್ (ಮೈಸೂರು) ಲಿ., ನಂ : 75, ಎಂ.ಜಿ. ರೋಡ್, ಬೆಂಗಳೂರು-1	ಸದಸ್ಯರು
ಕಾರ್ಮಿಕ ಪ್ರತಿನಿಧಿಗಳು		
1.	ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನ್ಯೂಸ್ ಪೇಪರ್ ಎಂಪ್ಲಾಯೀಸ್ ಯೂನಿಯನ್, ಕೆ/ಆಫ್ ಡೆಕ್ಕನ್ ಹೆರಾಲ್ಡ್, ಎಂ.ಜಿ. ರೋಡ್, ಬೆಂಗಳೂರು-1	ಸದಸ್ಯರು
2.	ಎಸ್.ವಿ. ಜಯಶೀಲ, ಬಚಾವತ್ ವೇತನ ಮಂಡಳಿ, ಮಾಜಿ ಸದಸ್ಯರು ಹಾಗೂ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಇದರ ಸಮಿತಿ ಸದಸ್ಯರು ಮತ್ತು ಜೆ.ಎಫ್.ಡಬ್ಲ್ಯೂ.ಜೆ. ಇದರ ಅಧ್ಯಕ್ಷರು, ನಂ : 431, 5ನೇ ಕ್ರಾಸ್, 7ನೇ ಬ್ಲಾಕ್, ವೆಸ್ಟ್ ಜಯನಗರ, ಬೆಂಗಳೂರು-82	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1043

ಯು.ಎನ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನ ಮಕರವಳ್ಳಿ, ಏತ ನೀರಾವರಿ ಯೋಜನೆ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸನೀಇ 30 ಏನೀಯೋ 2007 ದಿನಾಂಕ : 17-12-2007
2. ದಿನಾಂಕ : 17-03-2010ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-3/2009-10/1750
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 24-03-2010ರ ಪತ್ರ ಸಂಖ್ಯೆ : ಮುಸದ/ಆಪ್ತ ಶಾಖೆ/ಟೆಂಡರ್/08-09/744

ಪ್ರಸ್ತಾವನೆ :

ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನ ಮಕರವಳ್ಳಿ, ಏತ ನೀರಾವರಿ ಯೋಜನೆ ಕಾಮಗಾರಿಯ 650.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ 17-12-07ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ. ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	30-01-2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	06-02-2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು, ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿರುವುದಾಗಿ ವರದಿಯಾಗಿದೆ. ದಿನಾಂಕ : 22-02-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆದಿದ್ದು, ಇದರಲ್ಲಿ ಗುತ್ತಿಗೆದಾರರು ಅರ್ಹರಾಗಿದ್ದು, ಇವರ ಆರ್ಥಿಕ ಬಿಡ್‌ನ್ನು 24-02-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 5,85,01,470/-	
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಪರಿಷ್ಕೃತ ಮೊತ್ತ			ರೂ. 8,15,38,945/-	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಅಶೋಕ ಎಸ್. ಶೆಟ್ಟಿ, ಒಂದನೇ ದರ್ಜೆ ಗುತ್ತಿಗೆದಾರರು	9,54,38,112/-	63.14 ಹೆಚ್ಚು	17.046 ಹೆಚ್ಚು

ಮೇಲ್ಕಂಡಂತೆ ಶ್ರೀ ಅಶೋಕ ಎಸ್. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.046ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 23-03-2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 8,15,38,945/-ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 9,33,62,092/-ಗಳಿಗೆ ಕಾಮಗಾರಿಯನ್ನು ಶ್ರೀ ಅಶೋಕ ಎಸ್. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 18 ಏನೀಯೋ 2010, ಬೆಂಗಳೂರು, ದಿನಾಂಕ 20ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನ ಮಕರವಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 8,15,38,945/-ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 9,33,62,092/-ಗಳಿಗೆ (ಒಂಬತ್ತು ಕೋಟಿ ಮೂವತ್ಮೂರು ಲಕ್ಷದ ಅರವತ್ತೆರಡು ಸಾವಿರದ ತೊಂಬತ್ತೆರಡು ರೂ.ಗಳು ಮಾತ್ರ) ಶ್ರೀ ಅಶೋಕ ಎಸ್. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-1-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1044

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

SOCIAL WELFARE SECRETARIAT

NO. SWD 162 SAD 2009 BANGALORE, DATED : 09-04-2010.

NOTIFICATION

In exercise of the powers conferred by sub-section (1) of section (3) of the Commission of Inquiry Act, 1952 (Central Act 60 of 1952) the Government of Karnataka constituted Justice A.J. Sadashiva Commission of Inquiry (Constitutional benefit and revies of their disproportionate, inequitable distribution among Scheduled Castes in Karnataka) vide Notification No. SWD 227 SAD 2003, dated : 24-09-2005 and 26-12-2009 to inquire into the definite matter of public importance contained in the terms of reference stated therein and to submit a report within the period specified and such period is being extended from time to time till 31-12-2010.

Whereas the Government of Karnataka is of the opinion having regard to nature of inquiry to be made and other circumstances that provisions of Section 5 of the Commission of Inquiry Act, 1952 shall be made applicable to the Commission.

The Government of Karnataka, in exercise of powers conferred by sub-section (1) of Section 5 read with section 11 of the Commission of Inquiry Act, 1952 direct that all of the provisions of sub-section (1), (2), (3), (4) and (5) of the Section 5 as detailed hereunder shall apply to the Commission.

(1) The Commission shall have power to enquire any person, subject to any privilege which may be claimed by that person under any law for the time being in force, to furnish information on such points or matters as in the opinion of the Commission, may be useful for or relevant to the subject matter of the inquiry and any person so required shall be deemed to be legally bound to furnish such information within the meaning of Section 176 and Section 177 of the Indian Penal Code, 1860 945 of 1860).

(2) The Commission or any officer not below the rank of a Gazetted Officer, specially authorized in this behalf by the Commission may enter any building or place where the Commission has reasons to believe that any books of account or other documents relating to the subject matter of the inquiry may be found may seize any books of account or documents or take extracts or copies there from subject to the provisions of Section 102 and Section 103 of the code of Criminal Procedure, 1898 (5 of 1898) in so far as they may be applicable.

(3) The Commission shall be deemed to be a civil court and when any offence as is described in Section 175, Section 178, Section 179, Section 180 or Section 228 of the Indian Penal Code 1860 (45 of 1860) is committed in the view or presence of the Commission, the Commission may after recording the facts constituting the offence and the statement of the accused as provided for in the Code of Criminal Procedure, 1898 (5 of 1898), forward the case to a magistrate having jurisdiction to try the same and the magistrate to whom any such case is forwarded shall proceed to hear the complaint against the accused as if the case had been forwarded to him under Section 482 of the Code of Criminal Procedure, 1898.

(4) Any proceedings before the Commission shall be deemed to be a judicial proceeding within the meaning of Section 193 and 228 of the Indian Penal Code 1860 (45 of 1860).

(5) The Commission may for the purpose of conducting the investigation pertaining to the inquiry is authorized to appoint enumerators/supervisors empowering them to perform the following studies :-

   (i) To enter house, enclosures or any other place occupied by the householder for the purpose of carrying out the survey having regard to local customs.

   (ii) To paint or affix number on the building/survey house as may be necessary for the purpose of conducting household survey.

   (iii) To ask all such questions as printed in the house listing and individual family survey.

   (iv) To obtain answers from the respondents to all such questions printed in the schedule and asked by him/her.

By Order and in the name of the Governor of Karnataka

S. Lokanatha Rao
Under Secretary to Government-2
Social Welfare Department

PR NO. 1045

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಮೀನುಗಾರಿಕೆ ಇಲಾಖೆಯ ಚಾಲ್ತಿಯಲ್ಲಿರುವ ಯೋಜನೆಗಳನ್ನು ಸಂಬಂಧಿಸಿದ ಹುದ್ದೆಗಳೊಂದಿಗೆ 2010–11ನೇ ಸಾಲಿನಲ್ಲಿ ಮುಂದುವರಿಸುವಿಕೆ.

ಓದಲಾಗಿದೆ : 1. ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009 ದಿನಾಂಕ : 25–04–2009.

2. ಪತ್ರ ಸಂಖ್ಯೆ : ಪಂವಾಯೋ/162/2009–10 ದಿನಾಂಕ : 03–04–2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿದ್ದ ವಿವಿಧ ಯೋಜನೆಗಳನ್ನು 2009–10ನೇ ಸಾಲಿಗೆ ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು ರವರು ಮೀನುಗಾರಿಕೆ ಇಲಾಖೆಯ 2010–11ನೇ ಸಾಲಿನ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳು, ರಾಜ್ಯ ವಲಯ ಯೋಜನೆಗಳು ಮತ್ತು ಕೇಂದ್ರ ಪುರಸ್ಕೃತ ಜಿಲ್ಲಾ ಪಂಚಾಯತ್ ಯೋಜನೆಗಳು ಸೇರಿದಂತೆ ಒಟ್ಟು 29 ಯೋಜನೆಗಳನ್ನು ಮುಂದುವರಿಸಲು ಯೋಜನೆಗಳ ಸವಿಸ್ತಾರ ಪ್ರಸ್ತಾವನೆಗಳನ್ನು ಒದಗಿಸಿ, 2010–11ನೇ ಸಾಲಿಗೆ ಸಂಬಂಧಿತ ಹುದ್ದೆಗಳೊಂದಿಗೆ ಮುಂದುವರೆಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಖ್ಯಸ್ಥರು, ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳ ಪ್ರತಿನಿಧಿಗಳು ಹಾಗೂ ಇತರರನ್ನೊಳಗೊಂಡಂತೆ ದಿನಾಂಕ : 06–04–2010 ರಂದು ಸಭೆ ನಡೆಸಿ ಚರ್ಚಿಸಿ ಮೇಲ್ಕಂಡ ಯೋಜನೆಗಳನ್ನು 2010–11ನೇ ಸಾಲಿಗೆ ಮುಂದುವರೆಸುವುದು ಸೂಕ್ತ ಎಂದು ತೀರ್ಮಾನ ಕೈಗೊಳ್ಳಲಾಯಿತು.

ಮೇಲ್ಕಂಡ ತೀರ್ಮಾನ ಅನುಸರಿಸಿ ಸದರಿ 29 ಯೋಜನೆಗಳನ್ನು 2010–11ನೇ ಸಾಲಿಗೆ ಮುಂದುವರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ : ಪಸಂಮೀ 65 ಮೀಇಯೋ 2010, ಬೆಂಗಳೂರು, ದಿನಾಂಕ : 08ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ವಿವರಗಳ ಹಿನ್ನೆಲೆಯಲ್ಲಿ, ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ರಾಜ್ಯಮಟ್ಟದ ಯೋಜನೆಗಳು ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಸಂಬಂಧಿಸಿದ ಹುದ್ದೆಗಳೊಂದಿಗೆ 2010–11ನೇ ಸಾಲಿಗೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಮುಂದುವರೆಸಿ ಆದೇಶಿಸಲಾಗಿದೆ. ಹೀಗೆ ಮುಂದುವರೆಸಲಾದ ಕೇಂದ್ರ ವಲಯ, ಕೇಂದ್ರ ಪುರಸ್ಕೃತ ಮತ್ತು ರಾಜ್ಯ ವಲಯಗಳಲ್ಲಿನ ವಿವಿಧ ಯೋಜನೆಗಳ ವಿವರಗಳನ್ನು ಈ ಆದೇಶದ ಅನುಬಂಧ–1 ರಿಂದ 3 ರಲ್ಲಿ ವಿವರಿಸಿದೆ.

1) ಮುಂದುವರೆಸಲು ಉದ್ದೇಶಿಸಲಾದ ಯೋಜನೆಗಳ ಸಿಬ್ಬಂದಿಯನ್ನು ಹೊಸದಾಗಿ ಸೃಜಿಸುವ ಹಾಗೂ ಹೊಸ ವಾಹನಗಳು ಮತ್ತು ಉಪಕರಣಗಳ ಖರೀದಿ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ಪಿಡಿ 9 ಪಿಎಂಎಂ 98 ದಿನಾಂಕ : 27–05–1998 ರಲ್ಲಿ ಸೃಜಿಸಲಾಗಿರುವ ಸಮಿತಿಯ ಮುಂದೆ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಿ ಸದರಿ ಸಮಿತಿಯ ಅನುಮೋದನೆ ಪಡೆದು ಸದರಿ ವಿಚಾರದಲ್ಲಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

2) 2010–11ನೇ ಸಾಲಿಗೆ ಮುಂದುವರಿಸಲಾದ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸುವಲ್ಲಿ ಸದರಿ ಮಂಜೂರಾತಿಯು ಈ ಯೋಜನೆಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತವನ್ನು ಮೀರಕೂಡದು. ಹಾಗೂ ಸದರಿ ಕಾರ್ಯಕ್ರಮದಡಿ ಉಪಕರಣಗಳನ್ನು ಖರೀದಿಸುವುದು ಹಾಗೂ ಹೊಸ ಹುದ್ದೆಗಳನ್ನು ಸೃಜಿಸುವುದನ್ನು ಹೊರತುಪಡಿಸಿ ತತ್ಸಂಬಂಧ ಲೆಕ್ಕ ಶೀರ್ಷಿಕೆಯಲ್ಲಿ ಕಾಣಿಸಿದಂತೆ ನಿಯಮಾನುಸಾರ ಹಾಗೂ ರಾಜ್ಯ ಸರ್ಕಾರದ ಮತ್ತು ಭಾರತ ಸರ್ಕಾರದ ಯೋಜನಾ ಮಾರ್ಗಸೂಚಿಗಳಿಗೆ ಅನುಸಾರ ಯೋಜನೆಗಳನ್ನು ಅನುಷ್ಠಾನಗೊಳಿಸಿ ವೆಚ್ಚವನ್ನು ಭರಿಸತಕ್ಕದ್ದು.

3) 2010–11ನೇ ಸಾಲಿಗೆ ಹಮ್ಮಿಕೊಂಡಿರುವ ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೊದಲು ಸರ್ಕಾರಿ ಆದೇಶ ಸಂಖ್ಯೆ : ಪಿಡಿ 9 ಪಿಎಂಎಂ 98 ದಿನಾಂಕ : 27–05–1998ರನ್ವಯ ನಿಗದಿಪಡಿಸಿರುವ ಮಾರ್ಗಸೂಚಿಯನ್ನು ತಪ್ಪದೇ ಅನುಸರಿಸತಕ್ಕದ್ದು.

4) 2009–10ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದು, ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳನ್ನು 2010–11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಅನುಮೋದನೆ/ಮಂಜೂರಾತಿ ದೊರೆತಿದ್ದಲ್ಲಿ ಮಾತ್ರ ಅಂತಹ ಯೋಜನೆಗಳನ್ನು 2010–11ನೇ ಸಾಲಿಗೆ ಮುಂದುವರೆಸಲಾಗಿದೆ ಎಂದು ಭಾವಿಸಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಈ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗ್ಗೆ ಸುತ್ತೋಲೆ ಸಂಖ್ಯೆ : ಎಫ್‌ಡಿ 77 ಬಿಜಿಎಲ್ 94 ದಿನಾಂಕ : 08–03–1994ರಲ್ಲಿನ ಸೂಚನೆಗಳನ್ನು ಪಾಲಿಸತಕ್ಕದ್ದು.

5) ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳು 1999 ಮತ್ತು ಸಂಬಂಧಪಟ್ಟ ನಿಯಮಾವಳಿಗಳು 2000ರನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

6) 2010-11ನೇ ಸಾಲಿನಲ್ಲಿ ಆಯವ್ಯಯ ಅವಕಾಶಕ್ಕೆ ತಕ್ಕಂತೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಪಿಡಿ/5/ಐಎಂಎಂ/2010 ದಿನಾಂಕ : 03-04-2010 ರನ್ವಯ ಹಾಗೂ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ/1/ಟಿಎಫ್‌ಪಿ/96 ದಿನಾಂಕ : 10-07-1996 ಮತ್ತು ಎಫ್‌ಡಿ 9 ಟಿಎಫ್‌ಪಿ 2004 ದಿನಾಂಕ : 17-08-2004ಗಳಲ್ಲಿ ಆಡಳಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಎಂ. ರಾಜಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಆದೇಶ ಸಂಖ್ಯೆ : ಪಸಂಮೀ 65 ಮೀಇಯೋ 2010, ಬೆಂಗಳೂರು ದಿನಾಂಕ : 08-04-2010ರ

ಅನುಬಂಧ-1

2010-11ನೇ ಸಾಲಿಗೆ ಮುಂದುವರೆಸಬೇಕಾಗಿರುವ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳ ವಿವರಗಳು

ರೂ. ಲಕ್ಷಗಳಲ್ಲಿ

ಕ್ರ. ಸಂ.	ಯೋಜನೆಯ ಹೆಸರು	2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
1	ಕೇಂದ್ರ ವಲಯ ಒಳನಾಡು ಮೀನುಗಾರಿಕೆ ಅಂಕಿ-ಅಂಶಗಳು ನಿರ್ದೇಶನಾಲಯದಲ್ಲಿ ಸಾಂಖ್ಯಿಕ ಹುದ್ದೆಗಳನ್ನು ಬಲಪಡಿಸುವುದು. 2405-00-101-0-06	12.00 (ಕೇಂದ್ರ : 12.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-101-ಒಳನಾಡು ಮೀನುಗಾರಿಕೆ-0-06-ಸಿ.ಎಸ್.ಎಸ್.ಎಫ್. ಒಳನಾಡು ಮೀನುಗಾರಿಕೆ ಅಂಕಿ ಅಂಶಗಳು (ಕೇಂದ್ರ ವಲಯ ಯೋ)	ಒಳನಾಡು ಮೀನುಗಾರಿಕೆಯ ಅಂಕಿ ಅಂಶಗಳನ್ನು ಸಂಗ್ರಹಿಸಲು ಮಾದರಿ ವಿಧಾನಗಳನ್ನು ಅಭಿವೃದ್ಧಿಪಡಿಸಲು ಮಂಜೂರು ಮಾಡಿರುವ ಹುದ್ದೆಗಳನ್ನು ಮುಂದುವರೆಸುವುದು. ಗಣಕೀಕೃತ ಯಂತ್ರಗಳನ್ನು ಖರೀದಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

(ಅ) ಈ ಯೋಜನೆಯಡಿ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 1-4-2010 ರಿಂದ 31-3-2011 ರವರೆಗೆ ಲೆಕ್ಕ ಶೀರ್ಷಿಕೆ "2405-00-101-0-06 ಸಿಎಸ್‌ಎಸ್‌ಎಫ್-ಒಳನಾಡು ಮೀನುಗಾರಿಕೆ ಅಂಕಿ ಅಂಶಗಳು (ಯೋ)ಯಡಿ ಮುಂದುವರೆಸಬೇಕಾಗಿದೆ.

2405-00-101-0-06 (ರೂ.ಗಳಲ್ಲಿ)

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ
1	ಮೀನುಗಾರಿಕೆ ಉಪ ನಿರ್ದೇಶಕರು (ಸಾಂ)	1	18150-26925
2	ಇನ್‌ವೆಸ್ಟಿಗೇಟರ್ ಅಥವಾ ಟೆಕ್ನಿಷಿಯನ್ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)	1	10800-20025
	ಒಟ್ಟು ಹುದ್ದೆಗಳು	**2**	

ಕ್ರ. ಸಂ.	ಯೋಜನೆಯ ಹೆಸರು	2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
2	ಕೇಂದ್ರ ವಲಯ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಹೆಚ್.ಎಸ್.ಡಿ. ಮೇಲಿನ ಕೆಂದ್ರ ಅಬ್ಕಾರಿ ತೆರಿಗೆಯನ್ನು ಮಾಫಿ ಮಾಡುವುದು. 2405-00-103-0-06	400.00 (ಕೇಂದ್ರ : 400.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-103-ಸಮುದ್ರ ಮೀನುಗಾರಿಕೆ-0-06-ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಹೆಚ್.ಎಸ್.ಡಿ. ಮೇಲಿನ ಕೆಂದ್ರ ಅಬ್ಕಾರಿ ತೆರಿಗೆಯನ್ನು ಮಾಫಿ ಮಾಡುವುದು. (ಕೇಂದ್ರ ವಲಯ ಯೋಜನೆ)	ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಉಪಯೋಗಿಸುವ ಇಂಧನದ ಮೇಲಿನ ಕೇಂದ್ರ ಅಬ್ಕಾರಿ ಶುಲ್ಕ ವಿನಾಯಿತಿ ನೀಡಲು ಅವಕಾಶ ಕಲ್ಪಿಸಿದೆ. ಪ್ರತಿ ಲೀಟರ್ ಡೀಸಲ್ ಮೇಲೆ ರೂ. 3.00 ಗಳ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ ನೀಡಲಾಗುವುದು. ಇದು ಕೇಂದ್ರ ವಲಯ ಯೋಜನೆಯಾಗಿದ್ದು, ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಭರಿಸಲಾಗುವುದು.
3	ಕೇಂದ್ರ ಪುರಸ್ಕೃತ ತರಬೇತಿ ಮತ್ತು ವಿಸ್ತರಣೆ 2405-00-109-0-07	10.00 (ರಾ: 2.00 ಕೇಂ : 8.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-109-ವಿಸ್ತರಣೆ ಮತ್ತು ತರಬೇತಿ-0-07-ತರಬೇತಿ ಮತ್ತು ವಿಸ್ತರಣೆ (ಕೇಂದ್ರ ಪುರಸ್ಕೃತ ಯೋಜನೆ)	ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು, ಒಂದು ದಿನದ ಕಾರ್ಯಾಗಾರವನ್ನು ನಡೆಸಲು ಹಾಗೂ ಮೀನುಗಾರಿಕೆ ಬಗ್ಗೆ ಕೈಪಿಡಿಗಳನ್ನು ಮುದ್ರಿಸಲು ಅವಕಾಶವಿದೆ. ಜೊತೆಗೆ ತರಬೇತಿ ಮಾನ್ಯುವಲ್ ತಯಾರಿಸಲು ಹಾಗೂ ತರಬೇತಿ ಕೇಂದ್ರಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ.
4	ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣ ಯೋಜನೆ 2405-00-120-0-07	640.00 (ರಾ : 529.00 ಕೇಂ : 111.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-120-ಮೀನುಗಾರರ ಸಹಕಾರಿ ಸಂಸ್ಥೆಗಳು-0-07 ಮೀನುಗಾರರ ಕಲ್ಯಾಣ (ಕೇಂದ್ರ ಪುರಸ್ಕೃತ ಯೋಜನೆ)	ಈ ಯೋಜನೆಯಡಿ ಮೀನುಗಾರರ ಕಲ್ಯಾಣಕ್ಕಾಗಿ ಮನೆಗಳ ನಿರ್ಮಾಣ ಯೋಜನೆ, ಸಾಮೂಹಿಕ ವಿಮಾ ಯೋಜನೆ ಹಾಗೂ ಉಳಿತಾಯ ಹಾಗೂ ಪರಿಹಾರ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಸಾಮೂಹಿಕ ವಿಮಾ ಯೋಜನೆ ಯಡಿ ವಿಮಾ ಕಂತಿನ ಹಣ ರೂ. 36.00 ಲಕ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ. 50 ರಂತೆ ಪ್ರತಿ ವರ್ಷ ದೆಹಲಿ ಯಲ್ಲಿರುವ ಮೀನುಗಾರರ ಸಹಕಾರ ಸಂಘಗಳ ರಾಷ್ಟ್ರೀಯ ಮಂಡಳಿಗೆ ಬಿಡುಗಡೆಗೊಳಿಸ ಲಾಗುವುದು. ಈ ಯೋಜನೆ

					ಯಡಿ ರಾಜ್ಯದ 1.20 ಲಕ್ಷ ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲಾಗುವುದು. ಉಳಿತಾಯ ಹಾಗೂ ಪರಿಹಾರ ಯೋಜನೆ ಯಡಿ ಕರಾವಳಿ ಮೀನುಗಾರ ರಿಂದ ರೂ. 600/– ಗಳನ್ನು 9 ತಿಂಗಳ ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ. 600/– ಮತ್ತು ರಾಜ್ಯ ಸರ್ಕಾರ ರೂ. 600/– ಹೀಗೆ ಒಟ್ಟು ರೂ. 1800/–ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗ ಳಲ್ಲಿ ಪ್ರತಿ ತಿಂಗಳಿಗೆ ರೂ. 600 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು. ಕೇಂದ್ರ ಪುರಸ್ಕೃತ ಯೋಜನೆಯಡಿ ಮೀನುಗಾರರಿಗೆ ಮನೆಗಳ ನಿರ್ಮಾಣಕ್ಕೆ ರಾಜ್ಯದ ಪಾಲಿನ ಬಿಡುಗಡೆಗೆ ಹಾಗೂ ಹುಡ್ಕೋಗೆ ಸಾಲ ಮತ್ತು ಬಡ್ಡಿ ಮರುಪಾವ ತಿಗೆ ಅವಕಾಶ ಕಲ್ಪಿಸಲಾಗಿದೆ.
5	ಮೀನುಗಾರಿಕೆ ಬಂದರುಗಳ ನಿರ್ಮಾಣ – ಕೇಂದ್ರ ಪುರಸ್ಕೃತ ಯೋಜನೆ 4405–00–103–6–01	1960.00 (ರಾ : 490.00 ಕೇ : 1470.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ –00–103 ಸಮುದ್ರ ಮೀನುಗಾರಿಕೆ–6– ಮೀನುಗಾರಿಕೆ ಬಂದರುಗಳ ನಿರ್ಮಾಣ –01– ಯೋಜನಾ ಸಿಬ್ಬಂದಿ (ಕೇಂದ್ರ ಪುರಸ್ಕೃತ ಯೋಜನೆ)	ಪರಿಷ್ಕೃತ ಯೋಜನೆ ಪ್ರಕಾರ ಕೇಂದ್ರದ ಪ್ರತಿಶತ 75ರ ನೆರ ವಿನೊಂದಿಗೆ ರಾಜ್ಯದ ಎಲ್ಲಾ ಮೀನುಗಾರಿಕೆ ಬಂದರುಗಳ ನಿರ್ಮಾಣವನ್ನು ತೆಗೆದುಕೊಳ್ಳ ಲಾಗುವುದು. ಮಲ್ಪೆ, ಹೊನ್ನಾ ವರ, ಮಂಗಳೂರು ಮತ್ತು ಗಂಗೊಳ್ಳಿ ಮೀನುಗಾರಿಕೆ ಬಂದರುಗಳಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊ ಳಿಸಲು ಅವಕಾಶ ಕಲ್ಪಿಸಲಾಗಿದೆ.
6	ಅಪೇಕ್ಷಣ ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣ–ಕೇಂದ್ರ ಪುರಸ್ಕೃತ 4405–00–104–0–01	100–00 (ರಾಜ್ಯ ರೂ. 25.00 ಕೇಂದ್ರ ರೂ. 75.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ–00–104 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಸೌಕರ್ಯಗಳು–01– ಅಪೇಕ್ಷಣ ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)	ಅಳ್ವೆಕೋಡಿ ಕೇಂದ್ರದ ಇಳಿದಾಣ ನಿರ್ಮಾಣದ ಕೆಲಸವನ್ನು ತೆಗೆದು ಕೊಳ್ಳಲು ಅನುದಾನವನ್ನು ಒದಗಿ ಸಲಾಗಿದೆ. ಅಲ್ಲದೆ ರಾಜ್ಯದ ಇತರ ಇಳಿದಾಣ ಕೇಂದ್ರಗಳ ನಿರ್ಮಾಣವನ್ನು ಸಹ ಕೈಗೊಳ್ಳ ಬಹುದಾಗಿದೆ. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಪರಿಷ್ಕೃತ ದರದಂತೆ ಕೇಂದ್ರ ಸರ್ಕಾರವು ಯೋಜನೆಯ ಪ್ರತಿಶತ 75 ರಷ್ಟನ್ನು ಮತ್ತು ರಾಜ್ಯ ಸರ್ಕಾರವು ಪ್ರತಿಶತ 25 ರಷ್ಟನ್ನು ಭರಿಸಬೇಕಿರುತ್ತದೆ.
7	ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ	400.00 (ಕೇ:250.00 ರಾ : 150.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79	4405– ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ–00–103–	ಈ ಯೋಜನೆಯಡಿ ಅವಶ್ಯಕವಿರುವ ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತಲು

	4405–00–103–1–02		ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	ಸಮುದ್ರ ಮೀನುಗಾರಿಕೆ –1–02 ಹೂಳೆತ್ತುವುದು, ಜಲ ಸಂಚಾರ ಮತ್ತು ಇತರೆ ಕಾಮಗಾರಿಗಳು (ಯೋಜನೆ)	ಅವಕಾಶ ಕಲ್ಪಿಸಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 75 ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 25 ರಷ್ಟನ್ನುಭರಿಸುತ್ತದೆ.

ಡಿ.ಎಂ. ರಾಜಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ : ಪಸಂಮೀ 65 ಮೀಇಯೋ 2010, ಬೆಂಗಳೂರು ದಿನಾಂಕ : 08–04–2010ರ

ಅನುಬಂಧ–2

2010–11ನೇ ಸಾಲಿಗೆ ಮುಂದುವರೆಸಬೇಕಾಗಿರುವ ರಾಜ್ಯ ವಲಯ ಯೋಜನೆಗಳ ಬಗ್ಗೆ ವಿವರಗಳು

ರೂ. ಲಕ್ಷಗಳಲ್ಲಿ

ಕ್ರ. ಸಂ.	ಯೋಜನೆಯ ಹೆಸರು	2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
1	ರಾಜ್ಯ ವಲಯ ಯೋಜನೆಗಳು 2405–ಮೀನುಗಾರಿಕೆ–001–ಆಡಳಿತ ನಿರ್ದೇಶನ 01–ಮೀನುಗಾರಿಕೆ ಇಲಾಖೆಯ ನಿರ್ದೇಶಕರು 2405–00–001–0–01	35.38	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–001–ಆಡಳಿತ ಮತ್ತು ನಿರ್ದೇಶನ–0–01–ಮೀನುಗಾರಿಕೆ ಇಲಾಖೆಯ ನಿರ್ದೇಶಕರು (ಯೋಜನೆ)	ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಸಿಬ್ಬಂದಿ ವೆಚ್ಚ, ವಾಹನ ಖರೀದಿ, ಗಣಕಯಂತ್ರ, ಎಲೆಕ್ಟ್ರಾನಿಕ್ ಟೈಪ್‌ರೈಟರ್ಸ್, ಫ್ಯಾಕ್ಸ್, ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ ಇತ್ಯಾದಿ ವೆಚ್ಚವನ್ನು ಭರಿಸಲು ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ನಿರ್ದೇಶನಾಲಯವು ಸೇರಿದಂತೆ ಕಟ್ಟಡಗಳ ಬದಲಾವಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಸಲಾಗಿದೆ ಹಾಗೂ ನಿರ್ದೇಶನಾಲಯ ಮತ್ತು ವಿಭಾಗೀಯ ಅಧಿಕಾರಿಗಳ ಕಛೇರಿ ಕಟ್ಟಡ ನಿರ್ಮಿಸಲು ಅವಕಾಶವಿದೆ. ಮತ್ಸ್ಯಾಲಯಗಳ ಅಲಂಕಾರಿಕ ಕೆಲಸ ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಮತ್ತು ದುರಸ್ತಿಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಇಲಾಖೆಯ ಮೀನುಮರಿ

					ಕೇಂದ್ರಗಳ ನಿರ್ವಹಣೆಗೆ ತೆಗೆದು ಕೊಳ್ಳುವ ಕಾಮಗಾರಿಗಳನ್ನು ಮೀನು ಗಾರಿಕೆ ಇಳಿದಾಣಗಳಲ್ಲಿ ನಿರ್ವಹಣಾ ಕಾಮಗಾರಿಗಳನ್ನು ಇಲಾಖೆವತಿ ಯಿಂದ ತೆಗೆದುಕೊಳ್ಳುವ ಸಲುವಾಗಿ ಒಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಒಂದು ಸಹಾಯಕ ಅಭಿಯಂತರರ ಹುದ್ದೆಯನ್ನು ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ.

ಲೆಕ್ಕ ಶೀರ್ಷಿಕೆ "2405-00-001-0-01 ಮೀನುಗಾರಿಕೆ ಇಲಾಖೆಯ ನಿರ್ದೇಶಕರು (ಯೋ)

(ಅ) ಈ ಯೋಜನೆಯಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ದರ್ಜೆ-1) ಮೀನುಗಾರಿಕೆ ತರಬೇತಿ ಕೇಂದ್ರ ಬಿ.ಆರ್. ಪ್ರಾಜೆಕ್ಟ್ ಗೆ ಸರ್ಕಾರಿ ಆದೇಶ ಸಂ. ಪಸಂಮೀ/57/ಮೀ ಇಸೇ/97 ದಿನಾಂಕ : 31-3-2000ರಲ್ಲಿ ಸೃಷ್ಟಿಸಿರುವ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 1-4-2010 ರಿಂದ 31-03-2011 ರವರೆಗೆ ಮುಂದುವರೆಸಬೇಕಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಮೀನುಗಾರಿಕೆ ಕ್ಷೇತ್ರಪಾಲಕರು	2	5200-8200
2	ಜವಾನ	1	4800-7275
	ಒಟ್ಟು ಹುದ್ದೆಗಳು	**3**	

(ಆ) ಈ ಯೋಜನೆಯಡಿ ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ/57/ಮೀಇಸೇ/97 ದಿನಾಂಕ : 31-3-2000 ರಲ್ಲಿ ಈ ಕೆಳಕಂಡ ಕಛೇರಿಗೆ ಸೃಷ್ಟಿಸಿರುವ ಹುದ್ದೆಗಳನ್ನು ದಿನಾಂಕ : 1-4-2010 ರಿಂದ 31-03-2011 ರವರೆಗೆ ಮುಂದುವರೆಸಬೇಕಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಸಂಪನ್ಮೂಲಗಳ ಸಮಗ್ರ ಸಮೀಕ್ಷೆ ಹಾಗೂ ಮಾಸಿಕ ಮತ್ತು ವಾರ್ಷಿಕ ಮೀನು ಉತ್ಪಾದನಾ ಅಂಕಿ ಅಂಶಗಳ ಸಂಗ್ರಹಣೆ ಕ್ರೋಡೀಕರಣಕ್ಕಾಗಿ ಸೃಷ್ಟಿಸಿರುವ 13 ಮೀನುಗಾರಿಕೆ ಮೇಲ್ವಿಚಾರಕರ ಹುದ್ದೆಗಳ ಮುಂದುವರಿಕೆ.

ಕ್ರಮ ಸಂಖ್ಯೆ	ಹುದ್ದೆಗಳನ್ನು ಸೃಷ್ಟಿಸಿರುವ ಕಛೇರಿಗಳು	ಮೀನುಗಾರಿಕೆ ಮೇಲ್ವಿಚಾರಕರ (ಎಣಿಕೆದಾರರು) ಹುದ್ದೆಗಳು	ಕೇಂದ್ರ ಸ್ಥಾನ	ವೇತನ ಶ್ರೇಣಿ (ರೂ.ಗಳಲ್ಲಿ)
1	**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು** ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಮಂಗಳೂರು	1	ಮಂಗಳೂರು ಮೀನುಗಾರಿಕೆ ಬಂದರು (1)	10800-20025
2	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2) ಉಡುಪಿ	3	ಮಲ್ಪೆ ಮೀನುಗಾರಿಕೆ ಬಂದರು (1) ಹೆಜಮಾಡಿ ಇಳಿದಾಣ (1) ಹಂಗಾರಕಟ್ಟೆ ಇಳಿದಾಣ (1)	10800-20025 -,,- -,,-
3	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2) ಕುಂದಾಪುರ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳು	1	ಗಂಗೊಳ್ಳಿ ಇಳಿದಾಣ (1)	-,,-
4	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಕಾರವಾರ	3	ಬೈತಕೋಲ ಮೀನುಗಾರಿಕೆ ಬಂದರು (2) ಮಾಜಾಳಿ ಇಳಿದಾಣ (1)	-,,- -,,-

5	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಅಂಕೋಲ	1	ಕೇಣಿ ಇಳಿದಾಣ (1)	-,,-
6	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಕುಮಟಾ	2	ತದಡಿ ಮೀನುಗಾರಿಕೆ ಬಂದರು (1) ಗಂಗಾವಳಿ ಇಳಿದಾಣ (1)	-,,-
7	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಹೊನ್ನಾವರ	1	ಹೊನ್ನಾವರ ಮೀನುಗಾರಿಕೆ ಬಂದರು (1)	-,,-
8	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಭಟ್ಕಳ	1	ಮಾವಿನಕುರ್ವೆ ಇಳಿದಾಣ (1)	-,,-
	ಒಟ್ಟು ಹುದ್ದೆಗಳು	**13**		

(ಇ) ಸರ್ಕಾರದ ಆದೇಶ ಸಂಖ್ಯೆ : ಪಸಂಮೀ/89/ಮೀಇಯೋ/2003 ದಿನಾಂಕ : 21-8-2002 ರಲ್ಲಿ ಮೀನುಗಾರಿಕೆ ನಿರ್ದೇಶನಾಲಯದಲ್ಲಿ ದಿನಾಂಕ : 1-4-2006 ರಿಂದ 31-3-2007 ರವರೆಗೆ ಮುಂದುವರಿಸಲಾಗಿದ್ದು, ಈ ಹುದ್ದೆಯನ್ನು 1-4-2010 ರಿಂದ 31-3-2011ರವರೆಗೆ ಮುಂದುವರೆಸಬೇಕಾಗಿದೆ.

(ರೂ.ಗಳಲ್ಲಿ)

(1) ಬೆರಳಚ್ಚುಗಾರರು	1	5800-10500+ ವಿ.ವೇ.. 90

(ಈ) ಸರ್ಕಾರಿ ಮತ್ಸ್ಯಾಲಯ, ಕಬ್ಬನ್ ಪಾರ್ಕ್, ಬೆಂಗಳೂರು ಕಛೇರಿ ಮತ್ತು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1), ಕೆ.ಆರ್. ಸಾಗರದಲ್ಲಿನ ಮತ್ಸ್ಯಾಲಯಕ್ಕೆ ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ/57/ಮೀಇಸೇ/97 ದಿನಾಂಕ : 31-3-2000 ರಲ್ಲಿ ಸೃಷ್ಟಿಸಿರುವ ಈ ಕೆಳಕಂಡ ಹುದ್ದೆಗಳನ್ನು 1-4-2010ರಿಂದ 31-3-2011ರ ವರೆಗೆ ಮುಂದುವರೆಸಬೇಕಾಗಿದೆ. (ಲೆಕ್ಕ ಶೀರ್ಷಿಕೆ 2405-00-800-0-01 ನ್ನು ಲೆಕ್ಕ ಶೀರ್ಷಿಕೆ 2405-00-001-0-01ಕ್ಕೆ ವಿಲೀನಗೊಳಿಸಿದೆ)

1) ಸರ್ಕಾರಿ ಮತ್ಸ್ಯಾಲಯ, ಕಬ್ಬನ್ ಪಾರ್ಕ್, ಬೆಂಗಳೂರು

ಕ್ರಮ ಸಂಖ್ಯೆ	ಹುದ್ದೆಗಳು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಮೀನುಗಾರಿಕೆ ಕ್ಷೇತ್ರಪಾಲಕರು	3	5200-8200
2	ಬೆರಳಚ್ಚುಗಾರರು	1	5800—10500+ ವಿ.ವೇ.ರೂ. 90.00
	ಒಟ್ಟು ಹುದ್ದೆಗಳು	**4**	

2) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1) ರವರ ಕಛೇರಿ, ಕೆ.ಆರ್.ಸಾಗರದಲ್ಲಿನ ಮತ್ಸ್ಯಾಲಯ

ಕ್ರಮ ಸಂಖ್ಯೆ	ಹುದ್ದೆಗಳು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ದ್ವಿತೀಯ ದರ್ಜೆ ಸಹಾಯಕರು	1	5800-10500
2	ವಾಹನ ಚಾಲಕ	1	5800—10500+ ವಿ.ವೇ.ರೂ. 90.00
	ಒಟ್ಟು ಹುದ್ದೆಗಳು	**2**	

(ಉ) ಸರ್ಕಾರದ ಪತ್ರ ಸಂಖ್ಯೆ ಪಸಂಮೀ 143 ಮೀಇಯೋ 2004 ದಿನಾಂಕ 30-8-2007ರ ಪ್ರಕಾರ ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : ಆಇ/630/ವೆಚ್ಚ-4/06 ದಿನಾಂಕ : 4-8-2007 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಕೇಂದ್ರ ವಲಯದಿಂದ ರಾಜ್ಯ ವಲಯಕ್ಕೆ ವರ್ಗಾಯಿಸಲಾಗಿದೆ. ಈ ಯೋಜನೆಯಡಿಯಲ್ಲಿ ಈ ಕೆಳಗೆ ನಮೂದಿಸಿರುವ ಹುದ್ದೆಗಳನ್ನು ದಿನಾಂಕ : 1-4-2010 ರಿಂದ 31-3-2011ರ ಅವಧಿಗೆ ಮುಂದುವರೆಸಬೇಕಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಸಹಾಯಕ ಕಾರ್ಯಪಾಲಕ ಅಭಿಯಂತರರು	1	14050–25050
2	ಸಹಾಯಕ ಅಭಿಯಂತರರು	1	11400–21600
	ಒಟ್ಟು ಹುದ್ದೆಗಳು	**2**	

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
2.	101 ಒಳನಾಡು ಮೀನುಗಾರಿಕೆ 03 – ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ 2405–00–101–0–03	250.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–101–ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (ಯೋಜನೆ)	ಮೀನುಮರಿ ಉತ್ಪಾದನೆ, ಸಾಕಾಣಿ ಕೆಗೆ ಬೇಕಾಗುವ ಆಹಾರ, ಸಲಕರ ಣೆಗಳನ್ನು ಪಡೆಯಲು, ಉತ್ಪಾದನಾ ಕೇಂದ್ರಗಳಿಂದ ಶೇಖರಣಾ ಸ್ಥಳ ಗಳಿಗೆ ಸಾಗಿಸುವ ಮತ್ತು ಕೇಂದ್ರ ಕಛೇರಿಯ ವಾಹನಗಳ ನಿರ್ವ ಹಣೆ, ಮೀನುಗಾರಿಕೆ ಉತ್ಪಾದನಾ ಕೇಂದ್ರ ಗಳಿಗೆ ವಾಹನ ಖರೀದಿ ಮತ್ತು ನಿರ್ವ ಹಣೆ ಖಾಸಗಿಯವರಿಂದ ಮೀನುಮರಿ ಖರೀದಿ ಮುಂತಾದ ವೆಚ್ಚವನ್ನು ಭರಿಸ ಲಾಗುವುದು. ಜಲಾಶಯ ಮತ್ತು ಕೊಳದ ಮೀನುಗಾರಿಕೆಯನ್ನು ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಿ ವೆಚ್ಚವನ್ನು ಭರಿ ಸಲಾಗುವುದು. ದೋಷ ಪೂರಿತ ಕೊಳ ಗಳ ದುರಸ್ತಿ ನಿರ್ವಹಣೆ ಮತ್ತು ಉಪ ಯೋಗದಲ್ಲಿರುವ ಕೊಳಗಳ ವಾರ್ಷಿಕ ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ ಕುಮಟಾದಲ್ಲಿನ ಹ್ಯಾಚರಿಯನ್ನು ಸಿಹಿ ನೀರು ಸಿಗಡಿ ಮರಿ ಉತ್ಪಾದನೆಗೆ ಪರಿವ ರ್ತಿಸುವುದು. ರಾಜ್ಯದಲ್ಲಿ ಗುರುತಿಸಲಾದ ಮತ್ಸ್ಯಧಾಮಗಳ ಅಭಿವೃದ್ಧಿಯನ್ನು ಈ ಯೋಜನೆಯಡಿ ತೆಗೆದುಕೊಳ್ಳಲಾಗು ವುದು. ವಿನಾಶದ ಅಂಚಿನಲ್ಲಿರುವ ಸ್ಥಳೀಯ ಮೀನು ತಳಿಗಳ ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಈ ಮತ್ಸ್ಯಧಾಮ ಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳಲಾಗು ವುದು.

(ಅ) ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ/57/ಮೀಇಸೇ/97 ದಿನಾಂಕ : 31–3–2000 ರಲ್ಲಿ ಕೆಳಕಂಡ ಹುದ್ದೆಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ದರ್ಜೆ–1) ಭದ್ರಾ ಪ್ರಾಜೆಕ್ಟ್‌ನಲ್ಲಿ ಬಂದ್ ಬ್ರೀಡಿಂಗ್ ಘಟಕದ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ ಸೃಷ್ಟಿಸಿದ್ದು, ಈ ಹುದ್ದೆಗಳನ್ನು 2010–11ನೇ ಸಾಲಿಗೆ ಮುಂದುವರೆಸಬೇಕಾಗಿದೆ.

2405-00-101-0-03

ಕ್ರಮ ಸಂಖ್ಯೆ	ಹುದ್ದೆಗಳು	ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಪ್ರಥಮ ದರ್ಜೆ ಸಹಾಯಕ	1	7275-13350
2	ಬೆರಳಚ್ಚುಗಾರ	1	5800-10500+ (ವಿ.ವೇ. ರೂ. 90/-)
3	ಮೀನುಗಾರಿಕೆ ಕ್ಷೇತ್ರಪಾಲಕ	10	5200-8200
4	ಎಲೆಕ್ಟ್ರಿಷಿಯನ್	1	4575-8400
	ಒಟ್ಟು ಹುದ್ದೆಗಳು	**13**	

(ಆ) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1), ರಾಷ್ಟ್ರೀಯ ಮೀನುಮರಿ ಉತ್ಪಾದನಾ ಕೇಂದ್ರ, ಬಿ.ಆರ್. ಪ್ರಾಜೆಕ್ಟ್

2405-00-101-0-03

ಕ್ರಮ ಸಂಖ್ಯೆ	ಹುದ್ದೆಗಳು	ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ದ್ವಿತೀಯ ದರ್ಜೆ ಸಹಾಯಕರು	1	5800-10500
2	ಮೀನುಗಾರಿಕೆ ಮೇಲ್ವಿಚಾರಕರು	1	5800-10500
3	ಮೀನುಗಾರಿಕೆ ಕ್ಷೇತ್ರಪಾಲಕರು	4	5200-8200
4	ಜವಾನ	1	4800-7275
	ಒಟ್ಟು ಹುದ್ದೆಗಳು	**7**	

ಕ್ರ. ಸಂ.	ಯೋಜನೆಯ ಹೆಸರು	2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
3.	28 – ಮೀನುಮರಿ ಖರೀದಿಸಲು ನೆರವು 2405-00-101-0-28	100.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 146 ಮೀಇಯೋ 2008, ಬೆಂಗಳೂರು ದಿನಾಂಕ : 22-05-2009	2405-ಮೀನುಗಾರಿಕೆ-00-101-ಒಳನಾಡು ಮೀನುಗಾರಿಕೆ – 0-28-ಮೀನುಮರಿ ಖರೀದಿಸಲು ನೆರವು (ಯೋಜನೆ)	ಮೀನುಮರಿ ಖರೀದಿಗೆ ಗರಿಷ್ಠ ಶೇ. 50ಕ್ಕೆ ಮಿತಿಗೊಳಿಸಿ ಒಬ್ಬರಿಗೆ ಗರಿಷ್ಠ ರೂ. 5000.00 ಹಾಗೂ ಸಹಕಾರಿ ಸಂಘಗಳಿಗೆ ಮತ್ತು ನೋಂದಾಯಿತ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ. 20000 ಗಳ ಮಿತಿಗೆ ಒಳಪಟ್ಟು ಮೀನುಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಮೀನು ಕೃಷಿಕರ ಅಭಿವೃದ್ಧಿ ಮತ್ತು ತುಂಗಭದ್ರ ಮಂಡಳಿ ಮತ್ತು ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿಗಳ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸುವ ಮೀನುಮರಿಗಳಿಗೆ ಮಾತ್ರ ಈ ಸೌಲಭ್ಯವನ್ನು ನೀಡಲಾಗುವುದು.

ಕ್ರ. ಸಂ.	ಯೋಜನೆಯ ಹೆಸರು	2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
4.	103 – ಸಮುದ್ರ ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆ 2405–00–103–0–14 (ಯೋಜನೆ)	200.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–103–ಸಮುದ್ರ ಮೀನುಗಾರಿಕೆ–0–14 ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆ (ಯೋ)	ಮಲ್ಪೆ, ಮಂಗಳೂರು, ತದಡಿ, ಕಾರವಾರ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ನಿರ್ವಹಣೆಗಾಗಿ ಹಾಗೂ ತತ್ಸಂಬಂಧ ಸಿಬ್ಬಂದಿ ವೆಚ್ಚ ಭರಿಸಲು ಅವಕಾಶ ಕಲ್ಪಿಸ ಲಾಗಿದೆ. ಸಣ್ಣ ಮೀನುಗಾರಿಕೆ ಬಂದರು ಮತ್ತು ತಂಗುದಾಣಗಳಲ್ಲಿ ಹೂಳು ತುಂಬುವುದು ಸರ್ವೇ ಸಾಮಾನ್ಯ. ವಾರ್ಷಿಕ ಹೂಳೆತ್ತುವಿಕೆಗಾಗಿ ಹಾಗೂ ಮಾದರಿ ಅಧ್ಯಯನಕ್ಕೆ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ.

2405–00–103–0–14

(ಅ) ಬಂದರು ವ್ಯವಸ್ಥಾಪಕರ ಹುದ್ದೆಯನ್ನು ದಿನಾಂಕ : 1–4–2010 ರಿಂದ 31–3–2011 ರವರೆಗೆ ಮುಂದುವರಿಸಬೇಕಾಗಿದೆ. (ತದಡಿ ಬಂದರು) (ಸಂಚಿತ ವೇತನ ರೂ. 5,000)

(ಆ) ಈ ಯೋಜನೆಯಡಿಯಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಮೀನುಗಾರಿಕೆ ಬಂದರು ಕಛೇರಿ, ಮಂಗಳೂರು ಇಲ್ಲಿಗೆ ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ/57/ಮೀಇಸೇ/97 ದಿನಾಂಕ: 31–3–2000 ರಲ್ಲಿ ಸೃಷ್ಟಿಸಿರುವ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 1–4–2010 ರಿಂದ 31–3–2011 ರವರೆಗೆ ಮುಂದುವರೆಸಬೇಕಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳು	ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಮೀನುಗಾರಿಕೆ ಮೇಲ್ವಿಚಾರಕರು	2	5800–10500
2	ದ್ವಿತೀಯ ದರ್ಜೆ ಸಹಾಯಕರು	1	5800–10500
	ಒಟ್ಟು ಹುದ್ದೆಗಳು	**3**	

ಕ್ರ. ಸಂ.	ಯೋಜನೆಯ ಹೆಸರು	2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
5.	ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು 2405–00–103–0–15	50.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–	2405–ಮೀನುಗಾರಿಕೆ–00–103–ಸಮುದ್ರ ಮೀನುಗಾರಿಕೆ–	ಪ್ರಕೃತಿ ವಿಕೋಪದ ತೊಂದರೆಗೆ ಒಳಗಾಗುವ ಮೀನುಗಾರರಿಗೆ ಅವರ ಸಂಕಷ್ಟದಲ್ಲಿ ಪರಿಹಾರವನ್ನು ಒದಗಿಸಲು ಮೀನುಗಾರರ ಸಂಕಷ್ಟ ಪರಿಹಾರ ನಿಧಿಯೊಂದನ್ನು ಸ್ಥಾಪಿಸ

			2009	0–15–ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು (ಯೋ)	ಲಾಗಿದ್ದು, ಸದರಿ ನಿಧಿಗೆ ಸರ್ಕಾರ ದಿಂದ ಮೂಲ ಬಂಡವಾಳ ರೂ. 50.00 ಲಕ್ಷಗಳ ಅನುದಾನವನ್ನು ನೀಡಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.
6.	109–ವಿಸ್ತರಣೆ ಮತ್ತು ತರಬೇತಿ 01–ಸಂಶೋಧನೆ ವಿಸ್ತರಣೆ, ವಸ್ತು ಪ್ರದರ್ಶನ ಮತ್ತು ತರಬೇತಿ 2405–00–109–0–01	20.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–109–ವಿಸ್ತರಣೆ ಮತ್ತು ತರಬೇತಿ–0–01–ಸಂಶೋಧನೆ ವಿಸ್ತರಣೆ, ವಸ್ತು ಪ್ರದರ್ಶನ ಮತ್ತು ತರಬೇತಿ (ಯೋ)	ಉದ್ದಿಮೆದಾರರಿಗೆ ಮೀನು ರೋಗ ನಿವಾರಣೆಗೆ ರಾಸಾಯನಿಕ ವಸ್ತುಗಳನ್ನು ಖರೀದಿಸಲು ಅವಕಾಶವಿದೆ. ಮೀನುಗಾರಿಕೆ ಅಭಿವೃದ್ಧಿ ಮತ್ತು ಮೀನುಗಾರಿಕೆ ಬಗ್ಗೆ ತಾಂತ್ರಿಕ ಲೇಖನಗಳನ್ನು ಪ್ರಕಟಿಸಲು ಮತ್ತು ವಿಸ್ತರಣೆ ಸಲಕರಣೆ ಕೊಳ್ಳಲು ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಸ್ತ ಪ್ರತಿಗಳನ್ನು ಮುದ್ರಿಸಲು ಮತ್ತು ಇಲಾಖೆಯ ತಾಂತ್ರಿಕ ಚಟುವಟಿಕೆಗಳ ಬಗ್ಗೆ ಛಾಯಾಚಿತ್ರ ತೆಗೆಯಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರ ಸಮುದಾಯಕ್ಕೆ ಸೇರಿದ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಣಕಾಸು ನೆರವು ನೀಡುವುದು ಮತ್ತು ಖಾಸಗಿಯವರಿಗೆ ಮೀನುಗಾರಿಕೆಯಲ್ಲಿ ಹೆಚ್ಚಿನ ಮೀನು ಉತ್ಪಾದಿಸಿದವರಿಗೆ ನಗದು ಬಹುಮಾನ ನೀಡಲು ಹಾಗು ಮೀನುಗಾರಿಕೆ ಕುರಿತಾದ ಸಂಶೋಧನೆಗೆ ಅನುದಾನ ಬಿಡು ಗಡೆಗೆ ಈ ಯೋಜನೆಯಡಿ ಅವಕಾಶವಿದೆ. ರಾಜ್ಯದಲ್ಲಿ ನಡೆಯುವ ಪ್ರದರ್ಶನಗಳಲ್ಲಿ ಇಲಾಖೆಯಿಂದ ಭಾಗವಹಿಸಲು ಈ ಯೋಜನೆಯಡಿ ಅವಕಾಶ ವಿದೆ.

(ಅ) ಈ ಯೋಜನೆಯಡಿಯಲ್ಲಿ ಸರ್ಕಾರದ ಆಡಳಿತ ಸಂಖ್ಯೆ : ಪಸಂಮೀ/57/ಮೀಇಸೇ/97 ದಿನಾಂಕ : 31–3–2000 ರಲ್ಲಿ ಸೃಷ್ಟಿಸಿರುವ ಈ ಕೆಳಕಂಡ ನಿರ್ದೇಶನಾಲಯದ ಹುದ್ದೆಗಳನ್ನು ಮೀನುಗಾರಿಕೆ ವಿಸ್ತರಣೆ ವಿಭಾಗಕ್ಕೆ ದಿನಾಂಕ : 1–4–2010 ರಿಂದ 31–03–2011 ರವರೆಗೆ ಮುಂದುವರೆಸಬೇಕಾಗಿದೆ.

2405–00–109–0–01

ಕ್ರಮ ಸಂಖ್ಯೆ	ಹುದ್ದೆಗಳು	ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
1	ಮೀನುಗಾರಿಕೆ ಮೇಲ್ವಿಚಾರಕರು (ಪ್ರಚಾರ/ವಿಸ್ತರಣೆ)	1	8825–16000
2	ವಾಹನ ಚಾಲಕ	1	5800–10500+ವಿ.ವೇ.ರೂ.90.00
	ಒಟ್ಟು ಹುದ್ದೆಗಳು	**2**	

ಕ್ರ. ಸಂ.	ಯೋಜನೆಯ ಹೆಸರು	2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
7.	ರಾಜ್ಯ ವಲಯ ಯೋಜನೆಯಡಿ ಹಿಂದುಳಿದ ವರ್ಗಗಳಿಗೆ ವಿಶೇಷ ಘಟಕ ಯೋಜನೆ 2405–00–789–0–03	527.87	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 21 ಮೀಇಯೋ 2009, ಬೆಂಗಳೂರು ದಿನಾಂಕ : 04–07–2009	2405–ಮೀನುಗಾರಿಕೆ–00–789 ವಿಶೇಷ ಘಟಕ ಯೋಜನೆ–0–03 ರಾಜ್ಯವಲಯ ಯೋಜನೆಯಡಿ ಹಿಂದುಳಿದ ವರ್ಗಗಳಿಗೆ ವಿಶೇಷ ಘಟಕ ಯೋಜನೆ (ಯೋ)	ಪರಿಶಿಷ್ಟ ಜಾತಿ ಫಲಾನು ಭವಿಗಳಿಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸ ಲಾಗಿದೆ.
8.	ಗಿರಿಜನ ಪ್ರದೇಶ ಉಪಯೋಜನೆ 2405–00–796–0–00	210.75	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 21 ಮೀಇಯೋ 2009, ಬೆಂಗಳೂರು ದಿನಾಂಕ : 04–07–2009	2405–ಮೀನುಗಾರಿಕೆ–00–796 ಗಿರಿಜನ ಪ್ರದೇಶ ಉಪಯೋಜನೆ ಯೋಜನೆ 0–00 ಗಿರಿಜನ ಪ್ರದೇಶ ಉಪಯೋಜನೆ (ಯೋ)	ಪರಿಶಿಷ್ಟ ಪಂಗಡದವರಿಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.
9	ಮತ್ಸ್ಯವನ 2405–00–800–0–02	100.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 97 ಮೀಇಇ 2009, ಬೆಂಗಳೂರು ದಿನಾಂಕ : 06–07–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–01–ಮತ್ಸ್ಯವನ (ಯೋಜನೆ)	ಹೆಸರಘಟ್ಟ ಮೀನುಮರಿ ಉತ್ಪಾದನಾ ಕೇಂದ್ರದಲ್ಲಿ “ಅಕ್ವಾಪಾರ್ಕ್” ಸ್ಥಾಪಿಸಲು ಅನುದಾನ ಕಲ್ಪಿಸಲಾಗಿದೆ.
10	ಕರಾವಳಿ ಕೂಡು ರಸ್ತೆಗಳ ನಿರ್ವಹಣೆ 2405–00–800–0–15	500.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–15–ಕರಾವಳಿ ಕೂಡು ರಸ್ತೆಗಳ ನಿರ್ವಹಣೆ (ಯೋಜನೆ)	ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆಗಾಗಿ ಅನುದಾನ ಕಲ್ಪಿಸಲಾಗಿದೆ.
11	ಮತ್ಸ್ಯ ಮಹಿಳಾ ಸ್ವಾವಲಂಬನ ಯೋಜನೆ 2405–00–800–0–19	10.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–19–ಮಹಿಳಾ ಮತ್ಸ್ಯ ಸ್ವಾವಲಂಬನೆ ಕಾರ್ಯಕ್ರಮ (ಯೋಜನೆ)	ಮೀನುಗಾರಿಕೆಯಲ್ಲಿ ಮಹಿಳೆ ಯರು ಪ್ರಮುಖ ಪಾತ್ರವಹಿ ಸಲು ಮೀನುಗಾರ ಮಹಿಳೆ ಯರು ಮೀನು ಒಣಗಿಸುವ ಕಾರ್ಯದಲ್ಲಿ, ಮೀನು ಸಂಸ್ಕ ರಣೆ ಹಾಗೂ ಸ್ಥಳೀಯ ಮೀನು ವ್ಯಾಪಾರದಲ್ಲಿ ತೊಡ ಗಿಸಿಕೊಂಡಿರುತ್ತಾರೆ. ಹೀಗೆ ಮೀನುಗಾರಿಕೆ ಚಟುವಟಿಕೆ ಯಲ್ಲಿ ಮಹಿಳೆಯರು ತೊಡ ಗಿಸಿಕೊಂಡಿದ್ದು, ಅವರು

					ಅಗತ್ಯ ಬಂಡವಾಳಕ್ಕಾಗಿ ಹೆಚ್ಚು ಬಡ್ಡಿ ನೀಡಿ ಖಾಸಗಿ ಬಂಡವಾಳದಾರರಿಂದ ಸಾಲ ಪಡೆಯುತ್ತಿದ್ದು ಈ ಶೋಷಣೆಯಿಂದ ತಪ್ಪಿಸಲು ಆವೃತ್ತ ನಿಧಿಯಾಗಿ ಒಂದು ಗುಂಪಿಗೆ ತಲಾ ರೂ. 20,000–00 ನೀಡಿ ಅವರ ಆರ್ಥಿಕ ಮತ್ತು ಸಾಮಾಜಿಕ ಮಟ್ಟ ಸುಧಾರಿಸಲು ಅವಕಾಶವನ್ನು ಕಲ್ಪಿಸಲಾಗಿದೆ.
12	ಮತ್ಸ್ಯಶ್ರಯಾ ಯೋಜನೆ 2405–00–800–0–20	500.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–20–ಮತ್ಸ್ಯಾಶ್ರಯ ಯೋಜನೆ (ಯೋಜನೆ)	ನಿರ್ವಸತಿ ಮೀನುಗಾರರಿಗೆ ಮನೆಗಳನ್ನು ರೂ, 40,000 ಘಟಕ ವೆಚ್ಚದಲ್ಲಿ ನಿರ್ಮಾಸಲಾಗುವುದು. ಆ ಮೇರೆಗೆ ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆಗಳನ್ನು ನಿರ್ಮಿಸಲಾಗುವುದು.
13.	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2405–00–800–0–22	3483.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–22–ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಕೃಷಿ ಮಾರುಕಟ್ಟೆ	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕರ್ನಾಟಕ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಯೋಜನೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.
14	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ 2405–00–800–0–24	50.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 105 ಮೀಇಯೋ 2009, ಬೆಂಗಳೂರು ದಿನಾಂಕ : 16–07–2009	2405–ಮೀನುಗಾರಿಕೆ–00–800–ಇತರೆ ವೆಚ್ಚ–0–24–ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (ಯೋಜನೆ)	ಸದರಿ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ರೂ. 5000 ಮೌಲ್ಯದ ಮೀನು ಹಿಡುವಳಿಗೆ ಬೇಕಾದ ಬಲೆ, ಕೋರಾಕಲ್ (ಪುಟ್ಟಿ) ಮತ್ತು ಪೂರಕ ಸಾಮಗ್ರಿಗಳನ್ನು ಶೇ. 100 ರಷ್ಟು ಸಹಾಯಧನದ ರೂಪದಲ್ಲಿ ನೀಡಲು ಅವಕಾಶ ಕಲ್ಪಿಸಲಾಗಿದೆ.
15	ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು 2405–00–800–0–28	60.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 148 ಮೀಇಯೋ 2009, ಬೆಂಗಳೂರು ದಿನಾಂಕ : 01–02–2010	2405–ಮೀನುಗಾರಿಕೆ–00–800–ಇತರೆ ವೆಚ್ಚ–0–28 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು (ಯೋಜನೆ)	ವಾಣಿಜ್ಯ ಬ್ಯಾಂಕುಗಳು ಶೇ. 3 ರಷ್ಟು ಬಡ್ಡಿದರದಲ್ಲಿ ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.
16	ವೈದ್ಯಕೀಯ ವೆಚ್ಚದ ಮರುಪಾವತಿ 2405–00–800–0–25	–	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79	2405–ಮೀನುಗಾರಿಕೆ–00–800–ಇತರೆ ವೆಚ್ಚ–0–25 ವೈದ್ಯಕೀಯ	–

			ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	ವೆಚ್ಚದ ಮರುಪಾವತಿ (ಯೋಜನೆ)	
17	ಮೀನುಗಾರರಿಗೆ ಉಚಿತ ಗುರುತಿನ ಚೀಟಿ ವಿತರಣೆ	–	–	2405–ಮೀನುಗಾರಿಕೆ–00–800–ಇತರೆ ವೆಚ್ಚ–0–26 ಮೀನುಗಾರರಿಗೆ ಉಚಿತ ಗುರುತಿನ ಚೀಟಿ ವಿತರಣೆ (ಯೋಜನೆ)	ಸದರಿ ಯೋಜನೆಯನ್ನು ಕೇಂದ್ರ ಸರ್ಕಾರವು ಕೈಗೊಳ್ಳುತ್ತಿರುವುದರಿಂದ ಕೈಬಿಡಲಾಗಿದೆ.
18	03–ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ (ಗ್ರಾ.ಮೂ.ಸೌ.ಅ.ನಿ) 4405–00–800–2–03	1000.00	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ–00–800–ಇತರೆ ವೆಚ್ಚಗಳು–2–ರಸ್ತೆಗಳು–03 ಮೀನುಗಾರಿಕೆ ಕೂಡು ರಸ್ತೆಗಳ ಸೇತುವೆಗಳ ಮತ್ತು ಜಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ (ಗ್ರಾ.ಮೂ.ಸೌ.ಅ.ನಿ) (ಯೋಜನೆ)	ಗ್ರಾಮೀಣ ಮೂಲಭೂತ ಸೌಕರ್ಯ ನಿಧಿಯಡಿ ನಬಾರ್ಡ್ ನೆರವಿನೊಂದಿಗೆ ರಸ್ತೆ, ಸೇತುವೆ, ಜಟ್ಟಿಗಳ ನಿರ್ಮಾಣವನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
19	ಮೀನುಗಾರಿಕೆ ಬಂದರು ಮಂಗಳೂರು 4405–00–103–3–01	–	–	4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ–00–103–ಸಮುದ್ರ ಮೀನುಗಾರಿಕೆ–3 ಮೀನುಗಾರಿಕೆ ಬಂದರು ಮಂಗಳೂರು–01 –ನಿರ್ಮಾಣ (ಯೋಜನೆ)	ಮಂಗಳೂರು ಮೀನುಗಾರಿಕೆ ಬಂದರಿನ ನಿರ್ಮಾಣಕ್ಕಾಗಿ ಅನುದಾನ ಅವಕಾಶ ಕಲ್ಪಿಸಲಾಗಿದೆ.
20	ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನವೀಕರಣ– ಕೇಂದ್ರ ಪುರಸ್ಕೃತ 4405–00–104–0–02	1000.00 (ರಾ:1000.00)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25–04–2009	4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ–00–104–ಮೀನುಗಾರಿಕೆ ಬಂದರು ಮತ್ತು ಇಳಿದಾಣ ಸೌಕರ್ಯಗಳು –0–02 ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನವೀಕರಣ (ಕೇ.ಪು.ಯೋ)	ರಾಜ್ಯದಲ್ಲಿರುವ ಎಲ್ಲಾ ಮೀನು ಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನವೀ ಕರಣ ವೆಚ್ಚವನ್ನು ಈ ಯೋಜ ನೆಯಡಿ ಭರಿಸಲಾಗುವುದು. ಪರಿಷ್ಕೃತ ದರದಂತೆ ಕೇಂದ್ರ ಸರ್ಕಾರವು ಪ್ರತಿಶತ 75 ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 25 ರಷ್ಟನ್ನು ಭರಿಸು ವುದು. ಪ್ರಸಕ್ತ ಸಾಲಿನಲ್ಲಿ ಕೊಡೇರಿ ಇಳಿದಾಣ ಕೇಂದ್ರದ ನಿರ್ಮಾಣ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಡಿ. ಎಂ. ರಾಜಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ : ಪಸಂಮೀ 65 ಮೀಇಯೋ 2010, ಬೆಂಗಳೂರು ದಿನಾಂಕ : 08-04-2010ರ

ಅನುಬಂಧ-3

2010-11ನೇ ಸಾಲಿನಲ್ಲಿ ಈ ಕೆಳಕಂಡ ಕೇಂದ್ರ ಪುರಸ್ಕೃತ ಜಿಲ್ಲಾ ಪಂಚಾಯತ್ ಯೋಜನೆಗಳನ್ನು ಮುಂದುವರೆಸಬೇಕಾಗಿದೆ.

ರೂ. ಲಕ್ಷಗಳಲ್ಲಿ

ಕ್ರ. ಸಂ.	ಯೋಜನೆಯ ಹೆಸರು	2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
1.	ಕೇಂದ್ರ ಪುರಸ್ಕೃತ ಸಾಂಪ್ರದಾಯಿಕ ದೋಣಿಗಳನ್ನು ಯಾಂತ್ರೀಕರಿಸುವುದು (ಯೋಜನೆ) 2405-00-196-6-01 ಸದರಿ ಮೊತ್ತವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳಿಗೆ ಮೀನುಗಾರಿಕೆ ಇಲಾಖೆಯ ಮೂಲಕ ಬಿಡುಗಡೆ	59.40 (ರಾ : 29.70 ಲಕ್ಷ. ಕೇ:29.70 ಲಕ್ಷ)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-196- ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿ.ಪ. ಕೇಂದ್ರ ಪುರಸ್ಕೃತ ಯೋಜನೆ/ಕೇಂದ್ರ ವಲಯ ಯೋಜನೆ 01-ಬ್ಲಾಕ್ ಅನುದಾನ (ಯೋಜನೆ)	ಸದರಿ ಯೋಜನೆಯಡಿ ನಾಡದೋಣಿಗಳಿಗೆ 8-10 ಹೆಚ್.ಪಿ. ಸೀಮೆಎಣ್ಣೆ ಔಟ್ ಬೋರ್ಡ್ ಇಂಜಿನ್‌ನ್ನು ಅಳವಡಿಸಲು ಅವಕಾಶ ವಿದ್ದು, ಪ್ರತಿ ನಾಡದೋಣಿಯನ್ನು ಯಾಂತ್ರೀಕರಿಸಲು ರೂ. 60000 ವೆಚ್ಚವಾಗುವುದು. ಇದರಲ್ಲಿ 1/2 ಭಾಗದ ಸಹಾಯಧನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ಹಂಚಿಕೊಂಡು ಪ್ರತಿ ಯೊಬ್ಬರಿಗೆ ಗರಿಷ್ಠ ರೂ. 30,000 ರಂತೆ ನೀಡಲಾಗುವುದು. ಫಲಾನುಭವಿಗಳು ಉಳಿದ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಾಲ ಪಡೆಯುವ ಅವಕಾಶ ವಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಂಬಂದಪಟ್ಟ ಜಿಲ್ಲಾ ಪಂಚಾಯತ್	2010-11		
		ಕೇಂದ್ರ	ರಾಜ್ಯ	ಒಟ್ಟು
1	ದಕ್ಷಿಣ ಕನ್ನಡ	7.00	7.00	14.00
2	ಉತ್ತರ ಕನ್ನಡ	10.20	10.20	20.40
3	ಉಡುಪಿ	12.50	12.50	25.00
		29.70	29.70	59.40

ರೂ. ಲಕ್ಷಗಳಲ್ಲಿ

ಕ್ರ. ಸಂ.	ಯೋಜನೆಯ ಹೆಸರು	2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	ಹಿಂದೆ ಯೋಜನೆಯನ್ನು ಮುಂದುವರಿಸಿದ ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೆಯ ಬಗ್ಗೆ ಸೂಕ್ತ ವಿವರಣೆ
2.	ಕೇಂದ್ರ ಪುರಸ್ಕೃತ ಯೋಜನೆ-ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಮತ್ತು ಈ ಕೆಳಕಂಡ ರಾಜ್ಯ ಸರ್ಕಾರದ ಪಾಲಿನ ಹಣವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳಿಗೆ ಮೀನುಗಾರಿಕೆ ಇಲಾಖೆಯ ಮುಖಾಂತರ ಬಿಡುಗಡೆ 2405-00-196-6-02	322.26* (ರಾ:245.08 ಕೇಂ:77.18)	ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 79 ಮೀಇಯೋ 2009, ಬೆಂಗಳೂರು ದಿನಾಂಕ : 25-04-2009	2405-ಮೀನುಗಾರಿಕೆ-00-196- ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿ.ಪ. ಕೇಂದ್ರ ಪುರಸ್ಕೃತ ಯೋಜನೆ/ಕೇಂದ್ರ ವಲಯ ಯೋಜನೆ 02-ಮೀನುಗಾರರ ಅಭಿವೃದ್ಧಿ ಸಂಸ್ಥೆಗೆ ಒಳನಾಡು ಮೀನುಗಾರಿಕೆಯ ತೀವ್ರ ಅಭಿವೃದ್ಧಿಗೆ ಸಹಾಯ (ಯೋಜನೆ)	ಕೇಂದ್ರ ಪುರಸ್ಕೃತ ಯೋಜನೆಯಡಿ ರಾಜ್ಯದ ಒಟ್ಟು 13 ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು 2002-03ನೇ ಸಾಲಿನಿಂದ ಮುಂದುವರಿಸಿ ಕೇಂದ್ರ ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚದಲ್ಲಿ ಪ್ರತಿಶತ 75 ರಷ್ಟು ಸಹಾಯಧನ ರೂಪದಲ್ಲಿ ಭರಿಸುವುದು. ರಾಜ್ಯ ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಶತ 25 ರಷ್ಟನ್ನು ಹಾಗೂ ಅಧಿಕಾರಿ ಮತ್ತು ಸಿಬ್ಬಂದಿ ವೇತನವಲ್ಲದೆ ಇತರ ಆಡಳಿತಾತ್ಮಕ ವೆಚ್ಚಗಳ ಸಂಪೂರ್ಣ ವೆಚ್ಚವನ್ನು ಭರಿಸಬೇಕಿರುತ್ತದೆ. ನಿರುದ್ಯೋಗಿ ಯುವಕರಿಗೆ ಒಳನಾಡು ಮೀನುಗಾರಿಕೆಯಲ್ಲಿ ತರಬೇತಿ ನೀಡಿ ಅವರಿಗೆ ಕೆರೆಗಳನ್ನು ಗುತ್ತಿಗೆ ನೀಡಲಾಗುವುದು ಮತ್ತು ಸಲಕರಣೆಗಳನ್ನು ಕೊಳ್ಳಲು ಸಹಾಯಧನವನ್ನು ನೀಡಲು ಈ ಯೋಜನೆಯಡಿ ಅವಕಾಶವಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಉಪ್ಪುನೀರು ಮೀನು ಕೃಷಿಕರ ಅಭಿವೃದ್ಧಿ

					ಸಂಸ್ಥೆಗಳ ಮೂಲಕ ಕರಾವಳಿ ಜಿಲ್ಲೆಗಳ ಉಪ್ಪು ನೀರು ಪ್ರದೇಶಗಳಲ್ಲಿ ಸಿಗಡಿ ಕೃಷಿ ಅಭಿವೃದ್ಧಿಪಡಿಸುವುದು. ಪ್ರತಿವರ್ಷ ಸಿಗಡಿ ಕೃಷಿಯನ್ನು 50 ಹೆಕ್ಟೇರ್ ಉಪ್ಪು ನೀರು ಪ್ರದೇಶದಲ್ಲಿ ಅಭಿವೃದ್ಧಿಗೊಳಿಸುವ ಗುರಿ ಹೊಂದಿದೆ.

* ಲಿಂಕ್ ಡಾಕ್ಯುಮೆಂಟಿನಲ್ಲಿ ಹಾವೇರಿ ಜಿಲ್ಲೆಗೆ ಅನುದಾನ ಹೊರತುಪಡಿಸಿದ್ದರಿಂದ ಒಟ್ಟು ಅನುದಾನದಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಂಬಂಧಪಟ್ಟ ಜಿಲ್ಲಾ ಪಂಚಾಯತ್	ಸಂಬಂಧಪಟ್ಟ ಮೀ.ಕೃಷಿಕರ/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆ	2010–11		
			ಕೇಂದ್ರ	ರಾಜ್ಯ	ಒಟ್ಟು
1	ಚಾಮರಾಜನಗರ	ಮೈಸೂರು	3.00	1.00	4.00
2	ಮೈಸೂರು	ಮೈಸೂರು	4.69	18.50	23.19
3	ಶಿವಮೊಗ್ಗ	ಶಿವಮೊಗ್ಗ	4.00	14.19	18.19
4	ಧಾರವಾಡ	ಧಾರವಾಡ	3.18	19.00	22.18
5	ಹಾವೇರಿ	ಧಾರವಾಡ	3.00	1.00	4.00
6	ರಾಯಚೂರು	ರಾಯಚೂರು	10.00	23.00	33.00
7	ಕೊಪ್ಪಳ	ರಾಯಚೂರು	3.00	1.00	4.00
8	ಕೋಲಾರ	ಕೋಲಾರ	6.00	16.00	22.00
9	ಚಿಕ್ಕಮಗಳೂರು	ಚಿಕ್ಕಮಗಳೂರು	4.00	18.00	22.00
10	ಗುಲ್ಬರ್ಗ	ಗುಲ್ಬರ್ಗ	5.31	6.00	11.31
11	ತುಮಕೂರು	ತುಮಕೂರು	4.50	20.00	24.50
12	ಹಾಸನ	ಹಾಸನ	4.00	15.00	19.00
13	ಮಂಡ್ಯ	ಮಂಡ್ಯ	5.00	25.00	30.00
14	ಬೆಳಗಾಂ	ಬೆಳಗಾಂ	1.50	6.50	8.00
15	ಬೆಂಗಳೂರು (ನ)	ಬೆಂಗಳೂರು	3.00	7.50	10.50

16	ಬೆಂಗಳೂರು (ಗ್ರಾ)	ಬೆಂಗಳೂರು	1.25	11.25	12.50
17	ರಾಮನಗರಂ	ಬೆಂಗಳೂರು	1.25	5.00	6.25
18	ಬಳ್ಳಾರಿ	ಬಳ್ಳಾರಿ	3.00	1.00	4.00
19	ಉಡುಪಿ	ಉಡುಪಿ	4.50	19.97	24.47
20	ಉತ್ತರ ಕನ್ನಡ	ಕಾರವಾರ	3.00	16.17	19.17
		ಒಟ್ಟು	**77.18**	**245.08**	**322.26**

(ಅ) ಈ ಯೋಜನೆಯಡಿ ಮೀನು/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಈ ಕೆಳಕಂಡ ಹುದ್ದೆಗಳನ್ನು ಸೃಷ್ಟಿಸಲಾಗಿದ್ದು, ಈ ಹುದ್ದೆಗಳನ್ನು 1-4-2010 ರಿಂದ 31-3-2011 ರವರೆಗೆ ಮುಂದುವರೆಸಬೇಕಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ
1	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	9	14050-25050
2	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ-1)	3	11400-21600
3	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2)	25	10800-20025
4	ಕ್ಷೇತ್ರ ಅಧೀಕ್ಷಕರು	8	10800-20025
5	ಮೀನುಗಾರಿಕೆ ಮೇಲ್ವಿಚಾರಕರು	1	5800-10500
6	ಪ್ರಥಮ ದರ್ಜೆ ಸಹಾಯಕರು	21	7275-13350
7	ದ್ವಿತೀಯ ದರ್ಜೆ ಸಹಾಯಕರು	4	5800-10500
8	ಬೆರಳಚ್ಚುಗಾರರು	10	5800-10500
9	ವಾಹನ ಚಾಲಕ	14	5800-10500
10	ಮೀನುಗಾರಿಕೆ ಕ್ಷೇತ್ರಪಾಲಕರು	28	5200-8200
11	'ಡಿ' ಗುಂಪು ನೌಕರರು	27	4800-7275
	ಒಟ್ಟು ಹುದ್ದೆಗಳು	**150**	

ಡಿ.ಎಂ. ರಾಜಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಪಿ.ಆರ್. 1028